


# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 32 | ಏಪ್ರಿಲ್ – ಜೂನ್ 2019 | ರೂ. 10/– | ಸಂಚಿಕೆ 01


## ಸಡಗರದ ವಸಂತೋತ್ಸವ







**ಗಮನಿಸಿ**

- ಮಕ್ಕಳ ಪ್ರತಿಭಾ ಸ್ಪರ್ಧೆ : 28.7.2019
- ಶ್ರೀ ದುರ್ಗಾ ನಮಸ್ಕಾರ : 04.8.2019
- ಗುರಿಸಾಧನೆ – ವಿಚಾರ ಸಂಕಿರಣ : 18.8.2019
- ಪ್ರತಿಭಾ ಮೇಳ ಮತ್ತು ಪುರಸ್ಕಾರ : 25.8.2019
- ಗಣೇಶೋತ್ಸವ : 08.9.2019
- ವಾರ್ಷಿಕ ಸರ್ವಸದಸ್ಯರ ಸಭೆ : 15.9.2019

*With best compliments from :*

# TEDMAG
# ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

---

- **MILK PROCESSING**
- **FOOD PROCESSING**
- **PLANT TISSUE CULTURE**
- **ALLIED INDUSTRIES**

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 32 ಸಂಚಿಕೆ 01

ಅಧ್ಯಕ್ಷರು :
ಗೀತಾ ವಾಸುದೇವ ರಾವ್

ಕಾರ್ಯದರ್ಶಿ :
ಎಸ್. ಹರಿದಾಸ ಉಪಾಧ್ಯ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಜಾಹೀರಾತು ಸಮನ್ವಯ :
ಶ್ರೀ ವೈ. ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ
ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org

# ಅಧ್ಯಕ್ಷರ ಮಾತು



ಸಹೃದಯ ಸದಸ್ಯ ಬಾಂಧವರೇ,

ನೂತನ ಸಂವತ್ಸರ ವಿಕಾರಿ ಈಗಾಗಲೇ ಪ್ರಾರಂಭವಾಗಿದೆ. ಜೊತೆಗೆ ನಮ್ಮ ದೇಶವನ್ನು ಆಳಲು ಮಾನ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರವನ್ನು ಪ್ರಜ್ಞಾವಂತ ಪ್ರಜೆಗಳು ಮತ್ತೊಮ್ಮೆ ಆಯ್ಕೆ ಮಾಡಿದ್ದಾರೆ. ಕಳೆದ ಐದು ವರ್ಷಗಳ ಆಡಳಿತ ಸೇವಾ ಅವಧಿಯಲ್ಲಿ ಸಾಧಿಸಿ ತೋರಿಸಿದ ಪ್ರಗತಿಯನ್ನು ಗುರುತಿಸಿದ ಮತದಾರರು ಮತ್ತೊಮ್ಮೆ ಮೋದಿ ಸರ್ಕಾರವನ್ನು ಸ್ಪಷ್ಟ ಬಹುಮತದಿಂದ ಗೆಲ್ಲಿಸಿದ್ದಾರೆ. ಜೊತೆಗೆ ಹೊಸ ಸರ್ಕಾರದ ಮೇಲೆ ಬೆಟ್ಟದಷ್ಟು ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಜನರ ನಿರೀಕ್ಷೆ ಮತ್ತು ಅಪೇಕ್ಷೆಗೆ ಒಪ್ಪುವಂತೆ ಕಾರ್ಯನಿರ್ವಹಿಸುವ ಮಹಾನ್ ಜವಾಬ್ದಾರಿ ಸರ್ಕಾರದ ಮೇಲಿದೆ. ಇದು ಸಾಧ್ಯವಾಗಲಿ ಎಂದು ನಮ್ಮೆಲ್ಲರ ಹಾರೈಕೆ.

ಈಗಿರುವ ಆಷಾಢ ಕಳೆದು ಶ್ರಾವಣ ಬರುವ ಹೊತ್ತಿಗೆ ಹಬ್ಬ–ಹರಿದಿನಗಳು ಆರಂಭವಾಗುತ್ತವೆ. ಬಳಗದ ಮುಂದಿನ ಮೂರು ತಿಂಗಳಲ್ಲಿ ಬಹಳಷ್ಟು ಚಟುವಟಿಕೆಗಳನ್ನು ಸಂಯೋಜಿಸಲಾಗುತ್ತಿದೆ. 2019–20ನೇ ವರ್ಷದ ಪ್ರಥಮ ಕಾರ್ಯಕ್ರಮ ವಸಂತೋತ್ಸವ ಇತ್ತೀಚೆಗೆ ಆನಂದ ಸಭಾಗೃಹದಲ್ಲಿ ಸಡಗರದಿಂದ ನಡೆದಿದ್ದು, ವಾರ್ಷಿಕ ಚಟುವಟಿಕೆಗಳ ಸರಣಿಗೆ ಚಾಲನೆ ನೀಡಿದೆ. ಮುಂದೆ ನಮ್ಮ ಬಳಗದ ಬಾಲ ಪ್ರತಿಭೆಗಳ ಸ್ಪರ್ಧೆಗಳು ಹಾಗೂ ಪ್ರತಿಭಾ ಮೇಳವನ್ನು ಸಾಂಸ್ಕೃತಿಕ ವಿಭಾಗ ನಡೆಸಲಿದೆ. ಜೊತೆಯಲ್ಲೇ 2019ರ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ನಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದ ಬಳಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕರಿಸುವ ಕಾರ್ಯವೂ ನೆರವೇರಲಿದೆ. ಧಾರ್ಮಿಕ ವಿಭಾಗದ ವತಿಯಿಂದ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆಯಲಿರುವ ಶ್ರೀ ದುರ್ಗಾ ನಮಸ್ಕಾರ ಪೂಜೆ ಹಾಗೂ ಯುವ ವಿಭಾಗದ ನೇತೃತ್ವದಲ್ಲಿ ಹೋಟೆಲ್ ಅಜಂತಾದಲ್ಲಿ ಏರ್ಪಡಿಸಿರುವ ಗಣೇಶೋತ್ಸವ ಬಳಗದ ಸದಸ್ಯರಲ್ಲಿ ಧಾರ್ಮಿಕ ಪ್ರಜ್ಞೆ ಮತ್ತು ಚಿಂತನೆಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಲಿದೆ. ಜೀವನದಲ್ಲಿ ಮಹತ್ತರವಾದ ಗುರಿಯನ್ನು ಇರಿಸಿಕೊಂಡು, ಅದನ್ನು ಸಾಧಿಸುವ ದಿಸೆಯಲ್ಲಿ ಏನೇನು ಮಾಡಬೇಕು ಎಂಬ ವಿಚಾರದಲ್ಲಿ ಜಾಗೃತಿ ಮೂಡಿಸುವ ವಿಚಾರ ಸಂಕಿರಣವನ್ನು ಯುವ ವಿಭಾಗ ಸಂಯೋಜಿಸಿದೆ. ಅಲ್ಲದೆ ಬಳಗದ ಸದಸ್ಯರಿಗೆ ಕಾನೂನು ಶಿಕ್ಷಣ, ವೈದ್ಯಕೀಯ ಮತ್ತು ಗೃಹ ನಿರ್ಮಾಣ ವಿಚಾರದಲ್ಲಿ ಸಲಹೆಗಳೇನಾದರೂ ಬೇಕಿದ್ದರೆ, ಬಳಗದ ಪರಿಣತರಲ್ಲಿ ಮುಕ್ತವಾಗಿ ಸಮಾಲೋಚನೆ ಮಾಡಿ ಸೂಕ್ತ ಸಲಹೆಗಳನ್ನು ಪಡೆಯುವ 'ಸಹಾಯ – ಸಲಹೆ' ಎಂಬ ತಿಂಗಳ ಕಾರ್ಯಕ್ರಮಕ್ಕೂ ಚಾಲನೆ ಲಭಿಸಿದೆ.

ಇವೆಲ್ಲವುಗಳ ಮಧ್ಯೆ ಬಳಗದ ವಾರ್ಷಿಕ ಸರ್ವ ಸದಸ್ಯರ ಸಭೆ ದಿನಾಂಕ 15.9.2019ರಂದು ನಡೆಯಲಿದೆ. ಈ ಸಭೆಯಲ್ಲಿ ಸದಸ್ಯ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬಳಗದ ಪ್ರಗತಿಗೆ ರಚನಾತ್ಮಕ ಸಲಹೆ ಸೂಚನೆಗಳನ್ನು ನೀಡುವಿರಾಗಿ ನಿರೀಕ್ಷಿಸುತ್ತೇವೆ. ತಮ್ಮೆಲ್ಲರ ಸಹಕಾರವೇ ಬಳಗದ ಬಲವರ್ಧನೆಗೆ ಮೂಲಶಕ್ತಿ. ಅದಕ್ಕಾಗಿಯೇ ನಿಮ್ಮೆಲ್ಲರ ಸಂಪೂರ್ಣ ಬೆಂಬಲವನ್ನು ಸದಾ ಎದುರು ನೋಡುತ್ತೇವೆ.

ಶುಭಾಶಯಗಳೊಂದಿಗೆ

– ಗೀತಾ ವಾಸುದೇವರಾವ್

**Executive Committee Members : 2018-2020**

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| Y. Radhakrishna | 98440 58851 |
| ***Asst. Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| Y. Jayantha Rao | 94482 74519 |
| ***Convener, Youth Wing*** | |
| M. Krishna Prasad | 98450 18183 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| K.N. Adiga | 94488 48154 |
| ***Convener, Membership Devt. Wing*** | |
| M.K. Gurumurthy | 98440 22692 |
| ***Convener, Community Services*** | |
| P.C. Rao | 98444 46309 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Kasturi Aithal | 98803 98353 |
| ***Co-opted Members*** | |
| Geetha P.R. Rao | 99459 38411 |
| M Mohan Rao | 98453 79956 |
| Jayaprakash Mady | 98450 09669 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| UAP Ballal | 2226 7609 |
| STR Madi | 99029 77948 |
| ***Special Invitees*** | |
| T.S. Nagaraja Upadhyaya | 93412 26763 |
| Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| Madhavi Ballal | 99860 39107 |

ಒಳಪುಟಗಳಲ್ಲಿ. . .


| | | |
|---|---|---|
| ಅಧ್ಯಕ್ಷರ ಮಾತು | ... | 1 |
| ಪ್ರತಿಭಾ ಸ್ಪರ್ಧೆ 28.7.2019 | ... | 3 |
| ದೀಪ ದುರ್ಗಾ ನಮಸ್ಕಾರ | ... | 4 |
| ಪ್ರತಿಭಾ ಮೇಳ ಮತ್ತು ಪುರಸ್ಕಾರ | ... | 7 |
| ಶ್ರೀ ಗಣೇಶೋತ್ಸವ | ... | 8 |
| ಸಡಗರದ ವಷಂತೋತ್ಸವ | ... | 9 |
| ಯುವ ವಿಭಾಗದ ಸಭೆ | | |
| ಸಹಾಯ/ಸಲಹೆ | ... | 10 |
| ವಿಶೇಷ ದಿನಗಳು | ... | 12 |
| ಅಪ್ರತಿಮ ಯೋಗ ಸಾಧಕ | ... | 13 |
| ಪರನಿಂದೆಗಾಗಿ ಪಾಂಡಿತ್ಯ ಸಲ್ಲ | ... | 14 |
| ಪುತ್ತಿಗೆ ಶ್ರೀಗಳ ಚಾತುರ್ಮಾಸ್ಯ | ... | 15 |
| ಯುಗಾದಿ ಸಂಭ್ರಮ | ... | 17 |
| ವಾರ್ಷಿಕ ಸರ್ವಸದಸ್ಯರ ಸಭೆ ಸೂಚನಾ ಪತ್ರ | ... | 19 |
| ಹೆಣ್ಣು ಅಂದು – ಇಂದು | ... | 21 |
| ವ್ರತಾಚರಣೆ | ... | 22 |
| ಸುದ್ದಿ ಸಂಗ್ರಹ | ... | 23 |


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ಧಿ-ಸಂಗ್ರಹ ಅಂಕಣದಲ್ಲಿಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ:


ಎಂ. ಸತ್ಯನಾರಾಯಣ ಭಟ್

''ಕೃಷ್ಣ ಕೃಪಾ'', 12/1, 5ನೇ ಮೈನ್, ಇಟ್ಟುಮಡು,

ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560 085

E-mail: msbhat1958@gmail.com



ಗಮನಿಸಿ ! ಭಾಗವಹಿಸಿ !

# ಮಕ್ಕಳ ಪ್ರತಿಭಾಸ್ಪರ್ಧೆ 28.7.2019



ಸ್ಥಳ : **ಅಜಂತಾ ಹೋಟೆಲ್‌ನ ಆವರಣ,** ಎಂ.ಜಿ.ರಸ್ತೆ, ಬೆಂಗಳೂರು-560 001

ಆನಂದ ಬಳಗದ ಸಾಂಸ್ಕೃತಿಕ ಸಮಿತಿಯವರ ನೇತೃತ್ವದಲ್ಲಿ ಮಕ್ಕಳ ಪ್ರತಿಭಾ ಸ್ಪರ್ಧೆಗಳನ್ನು ದಿನಾಂಕ 28.7.2019ರ ಭಾನುವಾರ ಏರ್ಪಡಿಸಲಾಗಿದೆ. ಈ ಸ್ಪರ್ಧೆಗಳು 16 ವರ್ಷದ ಒಳಗಿನ (ಹತ್ತನೇ ತರಗತಿ ತೇರ್ಗಡೆ) ಬಾಲಕ/ಬಾಲಕಿಯರಿಗೆ ಸೀಮಿತವಾಗಿದ್ದು ವಿವಿಧ ಸ್ಪರ್ಧೆಗಳ ವಿವರ ಈ ರೀತಿ ಇದೆ :

| ಕ್ರ.ಸಂ | ಸ್ಪರ್ಧೆಗಳ ವಿವರ | ಸಮಯ | ವಯೋಮಿತಿ |
|---|---|---|---|
| 1 | ಚಿತ್ರಲೇಖನ | ಬೆಳಿಗ್ಗೆ 10.00 ರಿಂದ 11.30ರವರೆಗೆ | 6 ವರ್ಷಗಳವರೆಗೆ<br>6-12 ವರ್ಷಗಳವರೆಗೆ<br>12-16 ವರ್ಷಗಳವರೆಗೆ |
| 2 | ಸಂಸ್ಕೃತ ಶ್ಲೋಕ ಪಠಣ | ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.00 ರವರೆಗೆ | 6 ವರ್ಷಗಳವರೆಗೆ (ಯಾವುದಾದರು ಸಂಸ್ಕೃತ ಶ್ಲೋಕ)<br>6-12 ವರ್ಷಗಳವರೆಗೆ (ಮಂಗಳಾಷ್ಟಕ/ ಕೃಷ್ಣಾಷ್ಟೋತ್ತರ/ ವೆಂಕಟೇಶ ಸ್ತೋತ್ರ ಭಗವದ್ಗೀತೆಯ 15ನೇ ಅಧ್ಯಾಯ ಯಾವುದಾದರೂ 10 ಶ್ಲೋಕಗಳು) |
| 3 | ದೇವರ ನಾಮ | ಮಧ್ಯಾಹ್ನ 12.00 ರಿಂದ 12.30 | 12-16 ವರ್ಷಗಳವರೆಗೆ |
| 4 | ದೇವರ ನಾಮ | ಮಧ್ಯಾಹ್ನ 12.30 ರಿಂದ 1.00 | 6-12 ವರ್ಷಗಳವರೆಗೆ |
| 5 | ಪಿಕ್ ಎಂಡ್ ಸ್ಪೀಕ್ | ಮಧ್ಯಾಹ್ನ 1.00 ರಿಂದ 1.30 | 10-16 ವರ್ಷದವರೆಗೆ |
| 6 | ಭೋಜನ ವಿರಾಮ | 1.30 ರಿಂದ 2.00 | |
| 7 | ಭಾವಗೀತೆ/ಚಲನಚಿತ್ರಗೀತೆ | ಅಪರಾಹ್ನ 2.00 ರಿಂದ 2.45 | 12-16 ವರ್ಷಗಳವರೆಗೆ |
| 8 | ವಾದ್ಯ ಸಂಗೀತ | ಅಪರಾಹ್ನ 2.45 ರಿಂದ 3.15 | 10-16 ವರ್ಷಗಳವರೆಗೆ |
| 9 | ಛದ್ಮ ವೇಷ (ಫ್ಯಾನ್ಸಿ ಡ್ರೆಸ್) | ಅಪರಾಹ್ನ 3.15 ರಿಂದ 4.00 | 12 ವರ್ಷಗಳವರೆಗೆ |
| 10 | ಏಕಪಾತ್ರಾಭಿನಯ | ಸಂಜೆ 4.00 ರಿಂದ 5.00ರವರೆಗೆ | 10-16 ವರ್ಷಗಳವರೆಗೆ |

**ಸೂಚನೆ : 1) ಪ್ರತಿಸ್ಪರ್ಧೆಯಲ್ಲಿ ಕನಿಷ್ಠ ಆರು ಸ್ಪರ್ಧಿಗಳು ಇದ್ದರೆ ಮಾತ್ರ ಸ್ಪರ್ಧೆಯನ್ನು ನಡೆಸಲಾಗುವುದು.**
**2) ಛದ್ಮವೇಷದಲ್ಲಿ ವೇಷ ಭೂಷಣಗಳಿಗೇ ಪ್ರಾಮುಖ್ಯತೆ ಹೊರತು, ಅಭಿನಯ ಮತ್ತು ಮಾತುಗಾರಿಕೆಗಲ್ಲ.**

***

ಮಕ್ಕಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಈ ಅವಕಾಶದ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ಕೋರಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ತಮ್ಮ ಹೆಸರುಗಳನ್ನು ಶ್ರೀಮತಿಯರಾದ ಸೌಮ್ಯ (9886200062)/ ಮಾಧವಿ ಬಲ್ಲಾಳ್ (9986039107)/ಗೀತಾ ಪಿ. ರಾವ್ (9945938411) ಅಥವಾ ಹೆಚ್. ರಮೇಶ್ ಭಟ್ (9845024708) ಇವರಲ್ಲಿ ದಿನಾಂಕ 25.07.2019ರ ಒಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ

ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೆ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಸ್ತುತೆ ॥



# ದೀಪ ದುರ್ಗಾ ನಮಸ್ಕಾರ

## ದಿನಾಂಕ 04.8.2019, ಭಾನುವಾರ

ಪ್ರಿಯ ಸದಸ್ಯ ಬಾಂಧವರೇ,

ಕಲಿಯುಗದಲ್ಲಿ ಶೀಘ್ರಫಲವನ್ನು ನೀಡುವ ಶ್ರೀ ದುರ್ಗಾಮಾತೆಯ ಆರಾಧನೆ ನಿಮಗೆ, ನಮಗೆ ಮತ್ತು ಬಳಗಕ್ಕೆ ಶ್ರೇಯಸ್ಕರ. ಈ ಅಂಶವನ್ನು ಮನಗಂಡು, ನಮ್ಮ ಬಳಗವು ಕಳೆದ ಕೆಲವಾರು ವರ್ಷಗಳಿಂದ ಪ್ರತಿವರ್ಷವೂ ಸಾಮೂಹಿಕ ದೀಪ ದುರ್ಗಾ ನಮಸ್ಕಾರವನ್ನು ವಿಜೃಂಭಣೆಯಿಂದ ನೆರವೇರಿಸುತ್ತಾ ಬಂದಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸಕ್ರಿಯವಾಗಿ ಪಾಲ್ಗೊಂಡು, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ.

ಈ ವರ್ಷದ ದೀಪ ದುರ್ಗಾ ನಮಸ್ಕಾರವನ್ನು ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ಮತ್ತು ಇತರ ವಿಭಾಗಗಳ ಸಹಯೋಗದಲ್ಲಿ ದಿನಾಂಕ 04.8.2019ರ ಭಾನುವಾರ ಸಂಜೆ 4.25ರಿಂದ ಪರಮಪೂಜ್ಯ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಅನುಗ್ರಹದೊಂದಿಗೆ ಹಾಗೂ ವಿದ್ವಾನ್ ಯು. ಕೇಶವಾಚಾರ್ಯರ ಪ್ರಧಾನ ಪೌರೋಹಿತ್ಯದಲ್ಲಿ ಏರ್ಪಡಿಸಲಾಗಿದೆ.

ಸ್ಥಳ : **ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ**
ಡಾ. ವಿಶ್ವೇಶತೀರ್ಥ ಸ್ವಾಮೀಜಿ ರಸ್ತೆ, ಕತ್ತರಿಗುಪ್ಪೆ, ಬೆಂಗಳೂರು–28

ಸೇವಾ ವಿವರ : ಪೂರ್ಣಸೇವೆ – ರೂ 1000/–
ಪುಷ್ಪಾಲಂಕಾರ – ರೂ 500/–
ಸೇವಾ ಸಂಕಲ್ಪ – ರೂ 250/–

**ಗಮನಿಸಿ !!**
**ದುರ್ಗಾ ನಮಸ್ಕಾರದ ಸ್ಥಳವನ್ನು ಸದಸ್ಯರ ಅನುಕೂಲಕ್ಕಾಗಿ ವಿದ್ಯಾಪೀಠಕ್ಕೆ ಬದಲಾಯಿಸಲಾಗಿದೆ**

ಸದಸ್ಯ ಮಿತ್ರರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ,
ಈ ವಿಶೇಷ ಮತ್ತು ಅಪರೂಪದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

**ಶ್ರೀಮತಿ ವಿಜಯಲಕ್ಷ್ಮಿ ಭಟ್** (98441 52107)

**ಶ್ರೀ ವೈ ಜಯಂತರಾವ್** (94482 74519)

ವಿ.ಸೂ: ಪೂಜಾ ಕಾರ್ಯಕ್ರಮದ ನಂತರ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿದೆ.

**ಗೀತಾ ವಾಸುದೇವರಾವ್**
ಅಧ್ಯಕ್ಷರು, ಆನಂದ ಬಳಗ

**ಎಸ್. ಹರಿದಾಸ ಉಪಾಧ್ಯ**
ಕಾರ್ಯದರ್ಶಿ, ಆನಂದ ಬಳಗ

**ವೈ. ಜಯಂತರಾವ್**
ಸಂಚಾಲಕರು, ಧಾರ್ಮಿಕ ವಿಭಾಗ

ಸೂಚನೆ : 1) ಸದಸ್ಯರು ಸಾಂಪ್ರದಾಯಿಕ ಉಡುಪಿನಲ್ಲಿ ಬರಬೇಕಾಗಿ ವಿನಂತಿ
2) ದೇವಿಗೆ ಪ್ರಿಯವಾದ ಕೇಪುಳ ಹೂ ಲಭ್ಯವಿದ್ದರೆ ಅದನ್ನು ಬಿಡಿಸಿ, ತರಬೇಕಾಗಿ ಕೋರಿಕೆ

# ANANDA BALAGA YUVA VIBHAGA
# BANGALORE
# A ONE DAY EXPERIENTIAL WORKSHOP
# ON

# GOAL SETTING
# (SANKALPA SIDDHI)



Presentation By

## SAMHITH KUNJATHAYA

M.A. M.Phil. Spiritual Scientist, Philosopher, Hypnotherapist

- Learn How To Do Sankapla & Set The Goals For You.
- Gather Simple Ideas On How You Can Improve Health & Well-being.
- Get Ready, Train Your Mind, Start Immediately!
- A Pathway To Reach The Goal By Experiential Hypno-meditation & Suggestion.
- Guidance On Tips Tools, Tricks, Pranayama, Hypno-meditation And Many More Techniques.
- Enjoy The Blissful State Of Mind Through Various Experiences.

| | |
|---|---|
| Date | 18.8.2019 |
| TIME | 10am to 4pm |
| VENUE | Air Conditioned Hall, K.S.L.T.A. Cubbon Park Bangalore. |
| WHAT TO BRING | Come With An Open Mind |

For Entry Pass, Contact

M.Krishna Prasad
Convenor
9845018183

Rajesh Rao
Secretary
9886933802

Gopalakrishna. K
Treasurer
9980128059

Madhavi Ballal
Joint Convenor
9986039107

Prakash Bhat
Member
9845506777

**Entry Fees**
**Rs. 500**
First Come First Serve Basis
Limited Seats
Buffet lunch @ 1p.m

**Note: Near Cubbon Park Metro Station. Ample Parking Space Available Through Vishveshwaraya Museum Kasturba Road**

## ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಆನಂದ ಬಳಗವು ಪ್ರತಿವರ್ಷದಂತೆ ಈ ವರ್ಷವೂ ಬಳಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಅವರ ಪ್ರತಿಭೆಯನ್ನು ಪುರಸ್ಕರಿಸಲಿದೆ. 2019ರ ಮಾರ್ಚ್/ಏಪ್ರಿಲ್ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು 2ನೇ ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು.

**ಪುರಸ್ಕಾರಕ್ಕಾಗಿ ಪರಿಗಣಿಸುವ ಅಂಕಗಳ ವಿವರ**

| | |
|---|---|
| ಎಸ್.ಎಸ್.ಎಲ್.ಸಿ/10ನೇ ತರಗತಿ | ಶೇಕಡಾ 91 ಮತ್ತು ಅದಕ್ಕಿಂತ ಜಾಸ್ತಿ |
| ಸಿ.ಬಿ.ಎಸ್.ಸಿ. | ಸಿ.ಜಿ.ಪಿ.ಎ. 9.6 ಮತ್ತು ಅದಕ್ಕಿಂತ ಜಾಸ್ತಿ |
| ಐ.ಸಿ.ಎಸ್.ಸಿ. | ಶೇಕಡಾ 91 ಮತ್ತು ಅದಕ್ಕಿಂತ ಜಾಸ್ತಿ |
| ದ್ವಿತೀಯ ಪಿ.ಯು.ಸಿ./12ನೇ ತರಗತಿ | ಸೈನ್ಸ್/ವಿಜ್ಞಾನ ಶೇಕಡಾ 90 ಮತ್ತು ಅದಕ್ಕಿಂತ ಜಾಸ್ತಿ<br>ಕಾಮರ್ಸ್/ವಾಣಿಜ್ಯ ಶೇಕಡಾ 90 ಮತ್ತು ಅದಕ್ಕಿಂತ ಜಾಸ್ತಿ<br>ಆರ್ಟ್ಸ್/ಕಲೆ ಶೇಕಡಾ 85 ಮತ್ತು ಅದಕ್ಕಿಂತ ಜಾಸ್ತಿ |

ವಿದ್ಯಾರ್ಥಿಗಳು ತಮ್ಮ ಹೆಸರು, ವಿಳಾಸ, ಬಳಗದ ಸದಸ್ಯರ ಜೊತೆಗಿನ ಸಂಬಂಧ, ದೂರವಾಣಿ ಸಂಖ್ಯೆ ಮೊದಲಾದ ವಿವರಗಳು ಹಾಗೂ ಅಂಕಪಟ್ಟಿಯ ಪ್ರತಿಯನ್ನು ಆನಂದ ಬಳಗದ ಕಛೇರಿಗೆ ದಿನಾಂಕ 15.8.2019 ರ ಮುಂಚಿತವಾಗಿ ತಲಪುವಂತೆ ಕಳುಹಿಸಲು ಕೋರಲಾಗಿದೆ. ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ದೂರವಾಣಿ ಮೂಲಕ ತಿಳಿಸಲಾಗುವುದು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ದಿನಾಂಕ 25.8.2019ರಂದು ನಡೆಯಲಿದೆ. ಪ್ರತಿಭಾ ಪುರಸ್ಕಾರಕ್ಕೆ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ಅರ್ಹತೆ ಆಧಾರದ ಮೇಲೆ ಸೀಮಿತಗೊಳಿಸುವ ಸಾಧ್ಯತೆ ಇದೆ.



# ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ: ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್ ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

SBI Life
INSURANCE
With Us, You're Sure

*With best Compliments From :*

**Balakrishna Rao**
*Insurance Advisor*
Code : 16281955

SBI Life Insurance Co. Ltd.

**Member : C H Club**

No.353, "Srikrishna"
17th Main Road, Nandini Layout
Bengaluru - 560 096

For all your Life Insurance needs please contact

Mobile : 93412 42431
81051 86350

Email : bkrao353@gmail.com

ಶುಭಾಶಯಗಳನ್ನು ಕೋರುವವರು

|| ಹರಿಃ ಓಂ ||



# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ಪ್ರತಿಭಾ ಮೇಳ ಮತ್ತು ಪುರಸ್ಕಾರ
## 25.8.2019

ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ದಿನಾಂಕ 25.8.2019ರ ಭಾನುವಾರ ಸಂಜೆ 4.25ಕ್ಕೆ

**"ಮಕ್ಕಳ ಮೇಳ ಮತ್ತು ಪ್ರತಿಭಾ ಪುರಸ್ಕಾರ"**

ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

**ಪ್ರಸಿದ್ಧ ಸಾಹಿತಿ, ಲೇಖಕ ಹಾಗೂ ಪತ್ರಕರ್ತರಾದ**

**ಶ್ರೀ ಗಿರೀಶ್ ರಾವ್ (ಜೋಗಿ)**

ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.



ಸ್ಥಳ : **ಎ.ಡಿ.ಎ. ರಂಗಮಂದಿರ**

ಜೆ.ಸಿ. ರಸ್ತೆ, ಬೆಂಗಳೂರು–560 001

### ಕಾರ್ಯಕ್ರಮ

| | | |
|---|---|---|
| ಸಂಜೆ 3.30–4.15 | : | ಲಘು ಉಪಾಹಾರ |
| ಸಂಜೆ 4.15 | : | ಸಭಾ ಕಾರ್ಯಕ್ರಮ |
| | : | ದಿನಾಂಕ 28.7.2019 ರಂದು ನಡೆದ ಪ್ರತಿಭಾಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ |
| | : | 2018–19ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ |



**ಮಕ್ಕಳಿಂದ 'ಜೈ ಜವಾನ್ ಜೈ ಕಿಸಾನ್' ಪರಿಕಲ್ಪನೆಯಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ**

ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕಾಲಕ್ಕೆ ಆಗಮಿಸಿ ಬಳಗದ ಬಾಲಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

**ಗೀತಾ ವಾಸುದೇವರಾವ್**
ಅಧ್ಯಕ್ಷರು, ಆನಂದ ಬಳಗ

**ಎಸ್. ಹರಿದಾಸ್ ಉಪಾಧ್ಯ**
ಕಾರ್ಯದರ್ಶಿ, ಆನಂದ ಬಳಗ

**ಹೆಚ್.ರಮೇಶ್ ಭಟ್**
ಸಂಚಾಲಕರು, ಸಾಂಸ್ಕೃತಿಕ ವಿಭಾಗ



# ಗಣೇಶೋತ್ಸವ – 8.9.2019

**ಆನಂದ ಬಳಗದ ಯುವ ವಿಭಾಗದ ನೇತೃತ್ವದಲ್ಲಿ ದಿನಾಂಕ 8-9-2019ರ ಭಾನುವಾರದಂದು ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.**

## ಕಾರ್ಯಕ್ರಮದ ವಿವರ

| | | |
|---|---|---|
| ಪೂರ್ವಾಹ್ನ | : | ಗಣಹೋಮ ಆರಂಭ<br>ಮಹಿಳಾ ಸದಸ್ಯರಿಂದ ಗಣೇಶನ ಹೂವಿನ ರಂಗೋಲಿ ರಚನೆ<br>ಯುವ ಸದಸ್ಯರಿಂದ ಗಣೇಶನ ಅಲಂಕಾರ |
| ಪೂರ್ವಾಹ್ನ 11.30 | : | ಗಣಹೋಮದ ಪೂರ್ಣಾಹುತಿ |
| ಪೂರ್ವಾಹ್ನ 11.45 | : | ವಿಷ್ಣು ಸಹಸ್ರನಾಮ ಮತ್ತು ದೇವರನಾಮ |
| ಮಧ್ಯಾಹ್ನ 12.15 | : | **ಅನುಗ್ರಹ ಸಂದೇಶ: ಶ್ರೀ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು** |
| ಮಧ್ಯಾಹ್ನ 12.30 | : | ಮಹಾಪೂಜೆ – 'ಗಂಗಾರತಿ' ಶೈಲಿಯಲ್ಲಿ ಮಂಗಳಾರತಿ |
| ಅಪರಾಹ್ನ 1.00 | : | ಪ್ರಸಾದ ಭೋಜನ |
| ಅಪರಾಹ್ನ 2.00 | : | ಗಣೇಶನ ವಿಗ್ರಹದ ವಿಸರ್ಜನೆ |

---

**ಸೇವಾ ವಿವರ**

ಗಣಹೋಮ ಸೇವೆ : ರೂ.1000/–
ಅಲಂಕಾರ ಸೇವೆ : ರೂ.500/–
ಅಪ್ಪ ಪ್ರಸಾದ ಸೇವೆ : ರೂ.300/–

**ದಯವಿಟ್ಟು ಸ್ಥಳದ ಬದಲಾವಣೆಯನ್ನು ಗಮನಿಸಿ !!**

ಸ್ಥಳ : **ಶ್ರೀ ಗೋವರ್ಧನಗಿರಿ ಕ್ಷೇತ್ರ**
ಶ್ರೀ ಪುತ್ತಿಗೆ ಮಠ, 4ನೇ ಮಹಡಿ
ಬುಲ್‌ಟೆಂಪಲ್ ರಸ್ತೆ, ಬಸವನಗುಡಿ
ಬೆಂಗಳೂರು – 560 004

---

ವಿ.ಸೂ. : * ಸದಸ್ಯರು ತಾವೇ ರಚಿಸಿರುವ ಗಣೇಶನ ಚಿತ್ರಪಟ (ಪೈಂಟಿಂಗ್)ವನ್ನು ಪ್ರದರ್ಶಿಸಬೇಕಾಗಿ ಕೋರಿಕೆ

* ರಂಗೋಲಿ ಮತ್ತು ಗಣೇಶ ಚಿತ್ರ ಪ್ರದರ್ಶನದಲ್ಲಿ ಪಾಲ್ಗೊಂಡವರಿಗೆ ವಿಶೇಷ ಪ್ರಸಾದ ವಿತರಣೆ

ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಮಹಾಗಣಪತಿಯ ಕೃಪೆಗೆ ಪಾತ್ರರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.

| | | |
|---|---|---|
| **ಗೀತಾ ವಾಸುದೇವರಾವ್**<br>ಅಧ್ಯಕ್ಷರು, ಆನಂದ ಬಳಗ | **ಎಸ್. ಹರಿದಾಸ್ ಉಪಾಧ್ಯ**<br>ಕಾರ್ಯದರ್ಶಿ, ಆನಂದ ಬಳಗ | **ಎಂ. ಕೃಷ್ಣ ಪ್ರಸಾದ್**<br>ಸಂಚಾಲಕರು, ಯುವ ವಿಭಾಗ |

# ಸಡಗರದ ವಸಂತೋತ್ಸವ



ಆನಂದ ಬಳಗದ 2019–20ನೇ ವರ್ಷದ ಮೊದಲ ಕಾರ್ಯಕ್ರಮ ವಸಂತೋತ್ಸವವು ದಿನಾಂಕ 26.5.2019 ರಂದು ಸಂಜೆ 5 ರಿಂದ ಬನ್ನೇರುಘಟ್ಟ ರಸ್ತೆಯಲ್ಲಿರುವ ಆನಂದ ಸಭಾಗೃಹದಲ್ಲಿ ಸಂಭ್ರಮದಿಂದ ನೆರವೇರಿತು. ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ಹಾಗೂ ಇತರ ಉಪವಿಭಾಗಗಳ ಸಹಯೋಗದಲ್ಲಿ ನಡೆದ ವಸಂತೋತ್ಸವದ ಆರಂಭದಲ್ಲಿ ಮಾಸ್ಟರ್ ಎನ್.ಆರ್. ಶ್ರೀ ಕೃಷ್ಣ ಭಟ್ ಮತ್ತು ಸಂಗಡಿಗರಿಂದ ಅಮೋಘವಾದ ಕೊಳಲು ವಾದನ ನಡೆಯಿತು. ನಂತರ ನಡೆದ ಸರಳ ಸಭಾಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪೂರ್ಣಪ್ರಜ್ಞ ಜ್ಯೂನಿಯರ್ ಕಾಲೇಜು ಅದಮಾರು ಇದರ ನಿವೃತ್ತ ಪ್ರಾಧ್ಯಾಪಕರು, ಜನಪ್ರಿಯ ಲೇಖಕರು, ವಾಗ್ಮಿಗಳು ಮತ್ತು ಆಧ್ಯಾತ್ಮ ಚಿಂತಕರು ಜೊತೆಗೆ ಶ್ರೀ ಕುಂಜಾರ್‌ರವರು ಆಗಮಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಆನಂದ ಬಳಗದಂತಹ ಸಂಘ ಸಂಸ್ಥೆಗಳ ಅನಿವಾರ್ಯತೆಯನ್ನು ಪ್ರಸ್ತಾಪಿಸಿ, ಬಳಗಕ್ಕೆ ಮತ್ತು ತಮಗಿರುವ ದೀರ್ಘ ಕಾಲದ ಒಡನಾಟವನ್ನು ನೆನಪಿಸಿದರು. ವಸಂತೋತ್ಸವ ಅಥವಾ ಯಾವುದೇ ಸಾಮೂಹಿಕ ಕಾರ್ಯಕ್ರಮಗಳು ಸದಸ್ಯರನ್ನು ಒಂದೆಡೆ ಸೇರಿಸಲು ಅವಕಾಶ ಕಲ್ಪಿಸುತ್ತದೆ, ಹೀಗೆ ಬೆರೆತಾಗ ಮನಸ್ಸಿನಲ್ಲಿರುವ ಚಿಂತೆ, ಬೇಸರ, ದುಗುಡಗಳು ದೂರವಾಗಿ ಒಳ್ಳೆಯ ವಿಚಾರಗಳ ಬಗ್ಗೆ ಚಿಂತನೆಗೆ ಅನುಕೂಲವಾಗುತ್ತದೆ. ಮನುಷ್ಯ ತನ್ನ ವಿವೇಕದಿಂದ ಸದ್ಗುಣಗಳನ್ನು ರೂಢಿಸಿಕೊಂಡಾಗ ಮಾತ್ರಾ ಸಂತೋಷದಿಂದ ಬದುಕಬಲ್ಲ. ಇಂದಿನ ಅತಿ ವೇಗದ ಯುಗದಲ್ಲಿ ಅತಿಯಾದ ಆಸೆ, ನಿರೀಕ್ಷೆ ಅಪೇಕ್ಷೆಗಳೇ ಎಲ್ಲರ ದುಃಖಕ್ಕೆ ಮೂಲವಾಗಿದ್ದು, ಇದ್ದದರಲ್ಲಿ ತೃಪ್ತಿ ಪಡುವ ದೊಡ್ಡ ಗುಣವನ್ನು ರೂಢಿಸಿಕೊಂಡರೆ ನಾವೆಲ್ಲರು ನೆಮ್ಮದಿಯಿಂದ ಬಾಳಬಹುದು ಎಂಬ ಹಿತ ನುಡಿಗಳನ್ನು ನೆನಪಿಸಿದರು. ಸಮಾರಂಭವು ಕುಮಾರಿಯರಾದ ಸುನಯನ ಮತ್ತು ಸುನಿಧಿರವರ ಪ್ರಾರ್ಥನೆಯೊಂದಿಗೆ ಆರಂಭ ವಾಯಿತು. ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ಹೆಚ್. ರಮೇಶ್ ಭಟ್ ರವರು ಎಲ್ಲರನ್ನು ಸ್ವಾಗತಿಸಿ, ವಸಂತೋತ್ಸವದ ಮಹತ್ವದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾದ ಶ್ರೀ ಎ.ಬಿ. ಕುಂಜಾರ್‌ರವರ ಪರಿಚಯವನ್ನು ಮಹಿಳಾ ವಿಭಾಗದ ಕಾರ್ಯದರ್ಶಿ ಶ್ರೀಮತಿ ಶೋಭಾ ರಾಧಾಕೃಷ್ಣ ಸಭೆಗೆ ಮಾಡಿಕೊಟ್ಟರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಳಗದ ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ಬಳಗದ ಹೊಸ ವರ್ಷದ ಕಾರ್ಯಕ್ರಮಗಳ ಸರಣಿಗೆ ವಸಂತೋತ್ಸವ ನಾಂದಿ ಹಾಡಿದ್ದು, ವಿವಿಧ ಉಪವಿಭಾಗಗಳ ಸಹಯೋಗದಲ್ಲಿ ವರ್ಷ ಪೂರ್ತಿ ನಡೆಯಲಿರುವ ಕಾರ್ಯಕ್ರಮಗಳು ಸಾಂಗವಾಗಿ ನೆರವೇರುತ್ತಿರಲಿ ಎಂದು ಹಾರೈಸಿ, ಸದಸ್ಯರ ಹೆಚ್ಚಿನ ಸಹಕಾರವನ್ನು ಅಪೇಕ್ಷಿಸಿದರು. ಬಳಗದ ಕಾರ್ಯದರ್ಶಿ ಶ್ರೀ ಹರಿದಾಸ ಉಪಾಧ್ಯ ರವರು ವಂದನಾರ್ಪಣೆ ಮಾಡಿದರು. ಸಮಾರಂಭದ ನಿರೂಪಣೆಯನ್ನು ಶ್ರೀಮತಿ ಪಲ್ಲವಿ ಸುಧೀಂದ್ರರವರು ನಿರ್ವಹಿಸಿದರು.



ಸಾಂಸ್ಕೃತಿಕ ಕಾರ್ಯಕ್ರಮದ ಮುಂದುವರಿದ ಭಾಗವಾಗಿ ಶ್ರೀಮತಿ ಪ್ರಿಯಾಂಕ ವಿಕ್ರಂ ಇವರಿಂದ ಮನ ಮೋಹಕವಾದ ನೃತ್ಯ ಕಾರ್ಯಕ್ರಮ, ಸಭಿಕರನ್ನು ರಂಜಿಸಿತು. ಕೊನೆಯಲ್ಲಿ ವಸಂತ ಮಾಸದ ಆರಾಧ್ಯ ದೇವನಾದ ಶ್ರೀಕೃಷ್ಣನ ಪೂಜೆ, ಮಹಾಮಂಗಳಾರತಿ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್‌ರವರ ಪೌರೋಹಿತ್ಯದಲ್ಲಿ ನೆರವೇರಿತು.

ತೀರ್ಥ ಪ್ರಸಾದ ವಿತರಣೆ ನಂತರ ವಸಂತ – ವಿಶೇಷ ಫಲಾಹಾರದೊಂದಿಗೆ ಉತ್ಸವ ಸಂಪನ್ನವಾಯಿತು. ವರ್ಷದ ಮೊದಲ ಸಮಾರಂಭವನ್ನು ಅಚ್ಚುಕಟ್ಟಾಗಿ ಸಂಯೋಜಿಸಿದ ಶ್ರೀ ಹೆಚ್, ರಮೇಶ್ ಭಟ್ ಮತ್ತು ಅವರ ಕಾರ್ಯಶೀಲ ತಂಡಕ್ಕೆ ಶ್ಲಾಘನೆ ಸಲ್ಲಲೇ ಬೇಕು.

# ಯುವ ವಿಭಾಗದ ಕಾರ್ಯಕರ್ತರ ಸಭೆ

ಯುವ ವಿಭಾಗದ ಕಾರ್ಯಕರ್ತರ ಸಭೆಯೊಂದನ್ನು ದಿನಾಂಕ 5.5.2019 ರಂದು ಕರ್ನಾಟಕ ಟೆನ್ನಿಸ್ ಕ್ಲಬ್ ಸಂಘದ ಸಭಾಂಗಣದಲ್ಲಿ ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ಕೃಷ್ಣ ಪ್ರಸಾದ್‌ರವರ ನೇತೃತ್ವದಲ್ಲಿ ನಡೆಸಲಾಗಿತ್ತು. ಡಾ. ವೀಣಾ ಶರತ್ ಮತ್ತು ಶ್ರೀಮತಿ ನೈನಿ ಭಟ್ ರವರ ಪ್ರಾರ್ಥನೆಯೊಂದಿಗೆ ಆರಂಭವಾದ ಸಭೆಯಲ್ಲಿ ಯುವ ವಿಭಾಗದ



ಕಾರ್ಯದರ್ಶಿ ಶ್ರೀ ರಾಜೇಶ್ ರಾವ್ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಎಂ. ಕೃಷ್ಣ ಪ್ರಸಾದ್‌ರವರು ಯುವ ವಿಭಾಗದ ಹಿಂದಿನ ವರ್ಷದ ಕಾರ್ಯಕ್ರಮಗಳ ಅವಲೋಕನ ಮಾಡಿ ಪ್ರಸಕ್ತ ವರ್ಷದಲ್ಲಿ ಹಮ್ಮಿಕೊಳ್ಳಲಾಗುವ ಕಾರ್ಯ ಚಟುವಟಿಕೆಗಳ ಮುನ್ನೋಟವನ್ನು ನೀಡಿದರು. ಯುವ ವಿಭಾಗದ ಕೋಶಾಧಿಕಾರಿ ಶ್ರೀ ಗೋಪಾಲಕೃಷ್ಣ ಕುಂಜತ್ತಾಯರು 2018–19ನೇ ಸಾಲಿನ ವಿವಿಧ ಕಾರ್ಯಕ್ರಮಗಳ ಖರ್ಚು-ವೆಚ್ಚಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಸುಮಾರು 60 ಸದಸ್ಯರು ಪಾಲ್ಗೊಂಡ ಈ ಸಭೆಯಲ್ಲಿ ಪ್ರಸಕ್ತ ಸಾಲಿನ ಕಾರ್ಯಕ್ರಮಗಳನ್ನು ಹೆಚ್ಚು ಆಕರ್ಷಕವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸುವ ಬಗ್ಗೆ ಅಧಿಕ ಸಂಖ್ಯೆಯಲ್ಲಿ ಸದಸ್ಯರು ಪಾಲ್ಗೊಳ್ಳುವಂತೆ ಮಾಡುವ ಬಗ್ಗೆ ಸುದೀರ್ಘವಾಗಿ ವಿಚಾರಮಂಥನ ಮಾಡಲಾಯಿತು. ಆನಂದ ಬಳಗದ ಕಾರ್ಯದರ್ಶಿ ಶ್ರೀ ಎಸ್. ಹರಿದಾಸ ಉಪಾಧ್ಯಾಯರೂ ಸೇರಿದಂತೆ ಹಲವು ಸದಸ್ಯರು ಹಿಂದಿನ ಹಾಗೂ ಮುಂದಿನ ಕಾರ್ಯಕ್ರಮಗಳ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡರು. ಯುವ ವಿಭಾಗದ ಉಪಸಂಚಾಲಕಿ ಶ್ರೀಮತಿ ಮಾಧವಿ ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಪ್ರಕಾಶ್ ಭಟ್‌ರವರ ಧನ್ಯವಾದಾರ್ಪಣೆ ಹಾಗೂ ರುಚಿಕರವಾದ ಭೋಜನದೊಂದಿಗೆ ಸಭೆ ಮುಕ್ತಾಯ ವಾಯಿತು.

**ವರದಿ : ರಾಜೇಶ್ ರಾವ್**

ಪ್ರಸಕ್ತ ವರ್ಷ (2019–20) ರಲ್ಲಿ ಯುವ ವಿಭಾಗದಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ಸಂಯೋಜಿಸಲು ನಿರ್ಧರಿಸಲಾಯಿತು :

- ಗುರಿ ನಿರ್ಧರಿಸುವ ಬಗ್ಗೆ – ಜಾಗೃತಿ ಕಾರ್ಯಕ್ರಮ – 18.8.2019
- ಗಣೇಶೋತ್ಸವ : 8.9.2019
- 2020ರ ಕ್ಯಾಲೆಂಡರ್ ಬಿಡುಗಡೆ : 14.12.2019
- ಆನಂದ ಮಿಲನ – 2020 : 5.1.2020
- ಕ್ರೀಡಾ ಮಿಲನ – 2020 : 19.1.2020

'ಸಹಾಯ–ಸಲಹೆ' ಸಮಾಲೋಚನೆ – ಪ್ರತಿ ತಿಂಗಳ ಮೊದಲ ಶನಿವಾರ ಸಂಜೆ 4–6 ರವರೆಗೆ

## ಮಹಿಳಾ ವಿಭಾಗದಿಂದ ಪ್ರವಾಸ

**ಮಹಿಳಾ ವಿಭಾಗದವರು ಅಕ್ಟೋಬರ್ 2019ರಲ್ಲಿ ಭಾರತದ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳಿಗೆ 5-6 ದಿವಸಗಳ ಪ್ರವಾಸವನ್ನು ಸಂಯೋಜಿಸಲು ಯೋಜಿಸುತ್ತಿದ್ದಾರೆ. ಈ ಪ್ರವಾಸದ ಹೆಚ್ಚಿನ ವಿವರಗಳಿಗೆ ಆಸಕ್ತರು ಈ ಕೆಳಗಿನವರನ್ನು ಸಂಪರ್ಕಿಸಬಹುದಾಗಿದೆ:**

**ಶ್ರೀಮತಿ ಶೋಭಾ ರಾಧಾಕೃಷ್ಣ**
**98447 25547**

**ಶ್ರೀಮತಿ ಮೀನಾ ಮಹಾಬಲೇಶ್ವರ**
**98456 21250**

**ಶ್ರೀ ರಾಜೇಶ್‌ರಾವ್ ಪಿ**
**98869 38802**

# ಯುವ ವಿಭಾಗದಿಂದ 'ಸಹಾಯ – ಸಲಹೆ' ಸಮಾಲೋಚನೆ

ಆನಂದ ಬಳಗದ ಯುವ ವಿಭಾಗವು ಬಳಗದ ಸದಸ್ಯರ ಅಗತ್ಯಗಳಿಗೆ ಪೂರಕವಾದ ಹಲವಾರು ಚಟುವಟಿಕೆಗಳನ್ನು ಸಂಯೋಜಿಸುತ್ತಿದ್ದು, ಇದೀಗ 'ಸಹಾಯ–ಸಲಹೆ' ಎಂಬ ಹೊಸ ಕಾರ್ಯಕ್ರಮ ವೊಂದನ್ನು ಪ್ರಾರಂಭಿಸಿದೆ. ಬಳಗದ ಸದಸ್ಯರಿಗೆ ಕಾನೂನು ವೈದ್ಯಕೀಯ, ಗೃಹ ನಿರ್ಮಾಣ, ಶಿಕ್ಷಣ ಹೀಗೆ ಪ್ರಮುಖ ನಾಲ್ಕು ವಿಚಾರಗಳಲ್ಲಿ ಏನಾದರೂ ಸಲಹೆಗಳು ಬೇಕಾದಲ್ಲಿ, ಬಳಗದಲ್ಲಿರುವ ಪರಿಣತರೊಡನೆ ಮುಕ್ತ ಸಮಾಲೋಚನೆ ಮಾಡಿ ಸೂಕ್ತ ಸಲಹೆ ಅಥವಾ ಸಹಾ ಯವನ್ನು ಪಡೆಯಬಹುದಾದ ಈ ನೂತನ ಕಾರ್ಯಕ್ರಮವನ್ನು ಪ್ರತಿ ತಿಂಗಳ ಮೊದಲನೇ ಶನಿವಾರ ಸಂಜೆ 4 ರಿಂದ 6ರ ವರೆಗೆ ನಡೆಸಲು ನಿರ್ಧರಿಸಲಾಗಿದೆ.

'ಸಹಾಯ – ಸಲಹೆ' ಸರಣಿಯ ಪ್ರಥಮ ಕಾರ್ಯಕ್ರಮವನ್ನು ಹೋಟೆಲ್ ಅಜಂತಾ ಆವರಣದಲ್ಲಿ ದಿ. 1.6.2019 ರಂದು ಸಂಜೆ ಬಳಗದ ಮಾಜಿ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯರವರು ಬಳಗದ ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತಿತರರ ಸಮ್ಮುಖದಲ್ಲಿ ಉದ್ಘಾಟಿಸಿದರು. ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ. ಕೃಷ್ಣ ಪ್ರಸಾದ್ ಕಾರ್ಯಕ್ರಮದ ಉದ್ದೇಶ ಮತ್ತು ರೂಪು ರೇಷೆಗಳನ್ನು ವಿವರಿಸಿದರು. ಈ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕೋರಿ ಅನೇಕ ದೂರವಾಣಿ ಕರೆಗಳು ಬಂದಿದ್ದು, ಮುಂದಿನ ತಿಂಗಳುಗಳಲ್ಲಿ ಸದಸ್ಯರ ಪ್ರತಿಕ್ರಿಯೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಶ್ರೀ ಎಂ. ಕೆ. ಪ್ರಸಾದ್ ಹೇಳಿದರು. ಈ ಕಾರ್ಯಕ್ರಮವನ್ನು ಇನ್ನಷ್ಟು ಪರಿಣಾಮಕಾರಿಯನ್ನಾಗಿ ಮಾಡುವ ಬಗ್ಗೆ ವಿಚಾರ–ವಿನಿಮಯಗಳು ನಡೆದ ಮೇಲೆ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



**<u>ಸಹಾಯ – ಸಲಹೆ ನೀಡಲಿರುವ ಪರಿಣತರು</u>**

ಕಾನೂನು ಸಲಹೆ ಮತ್ತು ಮಧ್ಯಸ್ಥಿಕೆ :
**ಶ್ರೀ ಎಂ. ಮೋಹನ್ ರಾವ್**
**ಶ್ರೀ ಎಸ್. ಎನ್. ಪ್ರಶಾಂತ್ ಚಂದ್ರ**

ಶಿಕ್ಷಣ ಮತ್ತು ವೃತ್ತಿ ಹಾಗೂ ವೈದ್ಯಕೀಯ ವಿಚಾರ :
**ಡಾ. ವೀಣಾಶರತ್**
**ಶ್ರೀ ಗುರುರಾಜ ಪೇಜಾವರ**

ವಾಸ್ತು / ಗೃಹ ನಿರ್ಮಾಣ : **ಶ್ರೀ ದಿನೇಶ್ ರಾವ್ ಎಂ.**

## ವ್ಯಾಸಂಗ ಸಹಾಯ ಯೋಜನೆ–ಅರ್ಜಿಗಳಿಗೆ ಆಹ್ವಾನ

ಆನಂದ ಬಳಗವು ಕೆಲವು ವರ್ಷಗಳ ಹಿಂದೆ ಕೆಲವು ಉದಾರ ಮನಸ್ಸಿನ ದಾನಿಗಳ ಸಹಕಾರದಿಂದ ಆರಂಭಿಸಿರುವ ವ್ಯಾಸಂಗ ಸಹಾಯ ಯೋಜನೆಯ ಲಾಭವನ್ನು ಬಳಗದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಈಗಾಗಲೇ ಪಡೆದಿರುತ್ತಾರೆ.

2019–20ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕೆ ಸೇರಬಯಸುವ ಆರ್ಥಿಕವಾಗಿ ದುರ್ಬಲರಾದ ಸದಸ್ಯರ ಪ್ರತಿಭಾವಂತ ಮಕ್ಕಳು ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ. ಆಸಕ್ತಿಯುಳ್ಳ ಹಾಗೂ ಅರ್ಹಸದಸ್ಯರುಗಳು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :

**ಶ್ರೀ ಯಸ್.ಯನ್.ಶರತ್‌ಚಂದ್ರ**
ಸಂಚಾಲಕರು, ವ್ಯಾಸಂಗ ಸಹಾಯ ಯೋಜನೆ
ದೂರವಾಣಿ : 9886040271
ಆಸಕ್ತರು ದಿನಾಂಕ : 31.7.2019 ರೊಳಗಾಗಿ ನೋಂದಾಯಿಸಬೇಕಾಗಿ ವಿನಂತಿ

## ಜುಲೈ – ಅಕ್ಟೋಬರ್ 2019ರ ಅವಧಿಯ ವಿಶೇಷ ದಿನಗಳು

ಜುಲೈ 16, ಮಂಗಳ – ಕರ್ಕಾಟಕ ಸಂಕ್ರಮಣ ಹುಣ್ಣಿಮೆ ಖಂಡಗ್ರಾಸ ಚಂದ್ರಗ್ರಹಣ

ಜುಲೈ 28, ಭಾನುವಾರ – ಸರ್ವೈಕಾದಶೀ ಬಳಗದ ಪ್ರತಿಭಾ ಸ್ಪರ್ಧೆಗಳು

ಅಗಸ್ಟ್ 1, ಗುರುವಾರ – ಅಮಾವಾಸ್ಯೆ

ಅಗಸ್ಟ್ 2, ಶುಕ್ರವಾರ – ಶ್ರಾವಣ ಮಾಸ, ವರ್ಷಋತು ಆರಂಭ

ಅಗಸ್ಟ್ 4, ಭಾನುವಾರ – ಬಳಗದ ಶ್ರೀ ದುರ್ಗಾ ನಮಸ್ಕಾರ ಪೂಜೆ

ಅಗಸ್ಟ್ 5, ಸೋಮವಾರ – ನಾಗರ ಪಂಚಮಿ

ಅಗಸ್ಟ್ 9, ಶುಕ್ರವಾರ – ವರಮಹಾಲಕ್ಷ್ಮಿ ವ್ರತ

ಅಗಸ್ಟ್ 11, ಭಾನುವಾರ – ಸರ್ವೈಕಾದಶೀ

ಅಗಸ್ಟ್ 12, ಸೋಮವಾರ – ದಧಿ ವ್ರತಾರಂಭ

ಅಗಸ್ಟ್ 14, ಬುಧವಾರ – ಚಾಂದ್ರ ಋಗುಪಾಕರ್ಮ

ಅಗಸ್ಟ್ 15, ಗುರುವಾರ – ಹುಣ್ಣಿಮೆ ಯಜುರುಪಾಕರ್ಮ

ಅಗಸ್ಟ್ 17, ಶನಿವಾರ – ಸಿಂಹ ಸಂಕ್ರಮಣ, ಶ್ರೀ ರಾಘವೇಂಧ್ರ ಸ್ವಾಮಿಗಳ ಆರಾಧನೆ

ಅಗಸ್ಟ್ 18, ಭಾನುವಾರ – ಯುವ ವಿಭಾಗದಿಂದ ವಿಚಾರ ಸಂಕಿರಣ

ಅಗಸ್ಟ್ 23, ಶುಕ್ರವಾರ – ಶ್ರೀ ಕೃಷ್ಣ ಜನ್ಮಾಷ್ಟಮಿ

ಅಗಸ್ಟ್ 24, ಶನಿವಾರ – ಶ್ರೀ ಕೃಷ್ಣ ಲೀಲೋತ್ಸವ

ಅಗಸ್ಟ್ 25, ಭಾನುವಾರ – ಬಳಗದ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ

ಅಗಸ್ಟ್ 27, ಮಂಗಳವಾರ – ವೈಷ್ಣವೈಕಾದಶೀ

ಅಗಸ್ಟ್ 30, ಶುಕ್ರವಾರ – ಅಮಾವಾಸ್ಯೆ

ಅಗಸ್ಟ್ 31, ಶನಿವಾರ – ಭಾದ್ರಪದ ಮಾಸಾರಂಭ

ಸಪ್ಟೆಂಬರ್ 1, ಭಾನುವಾರ – ಗೌರೀ ತೃತೀಯಾ, ಸಾಮೋಪಕರ್ಮ

ಸಪ್ಟೆಂಬರ್ 2, ಸೋಮ – ಶ್ರೀ ಗಣೇಶ ಚತುರ್ಥಿ

ಸಪ್ಟೆಂಬರ್ 3, ಮಂಗಳ – ಋಷಿ ಪಂಚಮಿ

ಸಪ್ಟೆಂಬರ್ 8, ಭಾನುವಾರ – ಬಳಗದ ಗಣೇಶೋತ್ಸವ

ಸಪ್ಟೆಂಬರ್ 9, ಸೋಮವಾರ – ಸರ್ವೈಕಾದಶೀ

ಸಪ್ಟೆಂಬರ್ 10, ಮಂಗಳ – ಕ್ಷೀರ ವ್ರತಾರಂಭ

ಸಪ್ಟೆಂಬರ್ 11, ಬುಧವಾರ – ಸೌರ ಋಗುಪಾಕರ್ಮ

ಸಪ್ಟೆಂಬರ್ 12, ಗುರುವಾರ – ಅನಂತ ಚತುರ್ದಶೀ

ಸಪ್ಟೆಂಬರ್ 14, ಶನಿವಾರ – ಹುಣ್ಣಿಮೆ

ಸಪ್ಟೆಂಬರ್ 15, ಭಾನುವಾರ – ಪಿತೃಪಕ್ಷ ಆರಂಭ

ಸಪ್ಟೆಂಬರ್ 17, ಮಂಗಳ – ಕನ್ಯಾ ಸಂಕ್ರಮಣ

ಸಪ್ಟೆಂಬರ್ 25, ಬುಧವಾರ – ಸರ್ವೈಕಾದಶೀ

ಸಪ್ಟೆಂಬರ್ 28, ಶನಿವಾರ – ಮಹಾಲಯ ಅಮಾವಾಸ್ಯೆ

ಸಪ್ಟೆಂಬರ್ 29, ಭಾನುವಾರ – ಆಶ್ವಯುಜಮಾಸ, ಶರದೃತು ಹಾಗೂ ನವರಾತ್ರಿ ಆರಂಭ

ಅಕ್ಟೋಬರ್ 7, ಸೋಮ – ಮಹಾನವಮಿ

ಅಕ್ಟೋಬರ್ 8, ಮಂಗಳ – ವಿಜಯದಶಮಿ, ಮಧ್ವಜಯಂತಿ

ಅಕ್ಟೋಬರ್ 9, ಬುಧವಾರ – ಸರ್ವೈಕಾದಶೀ

ಅಕ್ಟೋಬರ್ 10, ಗುರುವಾರ – ದ್ವಿದಲ ವ್ರತಾರಂಭ

ಅಕ್ಟೋಬರ್ 13, ಭಾನುವಾರ – ಹುಣ್ಣಿಮೆ, ಕೋಜಾಗರೀ ಲಕ್ಷ್ಮೀಪೂಜೆ

ಅಕ್ಟೋಬರ್ 17, ಗುರುವಾರ – ತುಲಾ ಸಂಕ್ರಮಣ

(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)

## ಶುಭಾಶಯ

ವರಮಹಾಲಕ್ಷ್ಮಿ ವ್ರತದಿಂದ ಮೊದಲ್ಗೊಂಡು ಶ್ರೀಕೃಷ್ಣ ಜನ್ಮಾಷ್ಟಮಿ, ಗೌರಿ ಹಬ್ಬ, ಗಣೇಶ ಚತುರ್ಥಿ ಅನಂತ ಚತುರ್ದಶಿ, ನವರಾತ್ರಿ ಹೀಗೆ ಶ್ರಾವಣ ಭಾದ್ರಪದ ಮತ್ತು ಆಶ್ವಯುಜ ಮಾಸದಲ್ಲಿ ಹಬ್ಬ ಹರಿದಿನಗಳು ಸಾಲು ಸಾಲಾಗಿ ಬರಲಿದೆ.

ಈ ಪರ್ವ ದಿನಗಳ ಸಂದರ್ಭದಲ್ಲಿ ಭೃಗುವಾಣಿಯ ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ ಮತ್ತು ಬಳಗದ ಸರ್ವಸದಸ್ಯರಿಗೆ ಶುಭಾಶಯಗಳು

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

# ನೆಚ್ಚಿನ ಕುಟುಂಬಕ್ಕಾಗಿ, ಬೆಚ್ಚನೆಯ ಮನೆ, ಆರಾಮದಾಯಕ ಕಾರು.

ಕೆಬಿಎಲ್ **ಅಪ್ನಾ ಘರ್** ಮತ್ತು ಕೆಬಿಎಲ್ **ಕಾರು ಲೋನ್**

**ಆಕರ್ಷಕ ಬಡ್ಡಿದರ**



**ಸಾರ್ವಜನಿಕರಿಗೆ ಬ್ಯಾಂಕಿಂಗ್ ಸುರಕ್ಷೆಯ ಸಂದೇಶ**

ಯಾವುದೇ ವ್ಯಕ್ತಿ / ಸಾರ್ವಜನಿಕರ / ಟ್ರಸ್ಟ್ ಖಾತೆಗಳನ್ನು ಮತ್ತು ನಿಧಿಗಳನ್ನು ಆರ್‌ಬಿಐ ಇರಿಸಿಕೊಳ್ಳುವುದಿಲ್ಲ,
ನಿಮಗೆ ಕೊಡುಗೆಗಳು ಬಂದಿವೆ ಅಂತ ಆರ್‌ಬಿಐ ಹೆಸರನಲ್ಲಿ ಯಾವುದೇ ದೂರವಾಣಿ ಅಥವಾ ಇ-ಮೇಲ್ ಬಂದರೆ ಅವುಗಳಿಗೆ ಮೋಸ ಹೋಗಬೇಡಿ.

ಹೆಚ್ಚಿನ ವಿವರಗಳಿಗಾಗಿ ನಿಮ್ಮ ಹತ್ತಿರದ ನಮ್ಮ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ
ಅಥವಾ ಟೋಲ್ ಫ್ರೀ ಸಂಖ್ಯೆ : **1800 425 1444** ಗೆ ಕರೆ ಮಾಡಿ. Follow us on / karnatakabank

## ಕರ್ಣಾಟಕ ಬ್ಯಾಂಕ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

# FRIDGE HOUSE

Distributor & Dealer for

**HAVELLS Brand (Lloyd) AC's &**
**CARRIER MIDEA Air Conditioners**



Tower AC



Split AC



Cassette AC



Window AC



Ductable AC

Contact Persons: Mr. M K Prasad & Mr. B Krishnaswamy – M: 9845330571

FRIDGE HOUSE
DELIVERING TRUST

# FRIDGE HOUSE

EMERSON
AUTHORIZED FULL-LINE WHOLESALER

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

Enriching Lives

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
Email ID : info@fridgehouse.net; Web Site: www.fridgehouse.net

Contact Persons: M.K. Prasad & Mr. Nagesh D Prabhu – M: 9845217197

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

# ಅಪ್ರತಿಮ ಯೋಗ ಸಾಧಕ ಪೇಜಾವರ ಕಿರಿಯ ಶ್ರೀಪಾದರು



ಹೌದು. ಪೇಜಾವರ ಮಠದ ಕಿರಿಯ ಶ್ರೀಪಾದರಾದ ಪೂಜ್ಯ ವಿಶ್ವ ಪ್ರಸನ್ನ ತೀರ್ಥರು ಅಪ್ರತಿಮ, ಅಪರೂಪದ ಯೋಗ ಸಿದ್ಧರು.

ನಮಗೆಲ್ಲಾ ಆಶ್ಚರ್ಯವಾಗಬಹುದು! ಕೇವಲ ತಮ್ಮ ಜಪ–ತಪ ತರ್ಪಣಗಳಿಗೆ ಸೀಮಿತವಾಗುವ ಸನ್ಯಾಸಿಗಳಲ್ಲಿ ಅಪರೂಪದಲ್ಲೂ ಅಪರೂಪ ವಿಶ್ವ ಪ್ರಸನ್ನ ತೀರ್ಥರು. ಕಿರಿಯ ಶ್ರೀಪಾದರು ಅತ್ಯಂತ ಕ್ಲಿಷ್ಟಕರವಾದ ಯೋಗಾಸನಗಳನ್ನು ನೀರು ಕುಡಿದಷ್ಟೇ ಸಲೀಸಾಗಿ ನಿರ್ವಹಿಸಿ ಬಿಡುತ್ತಾರೆ. ನಾವು ಕೇಳದ ಎಷ್ಟೋ ಆಸನಗಳನ್ನು ಮಾಡಿ ತೋರಿಸಿ ಹುಬ್ಬೇರುವಂತೆ ಮಾಡುತ್ತಾರೆ. ಅತ್ಯಂತ ಕ್ಲಿಷ್ಟವಾದ ಕುಕ್ಕಟ – ವೃಶ್ಚಿಕ – ಮಯೂರ, ಉಪವಿಷ್ಠ ಕೋನಾಸನಗಳು ಸೇರಿದಂತೆ ಹಲವು ಆಸನಗಳನ್ನು ಲೀಲಾಜಾಲವಾಗಿ ನಿಭಾಯಿಸಿ ಬಿಡುತ್ತಾರೆ. ಇನ್ನೂ ಆಶ್ಚರ್ಯವೆಂದರೆ ಯೋಗ ಸಾಧಕರೆಂದು ಗುರುತಿಸಿಕೊಂಡು ಜಗತ್ತಿನಲ್ಲೆಲ್ಲ ಪ್ರಸಿದ್ಧರಾದವರೂ ಸಾಧಿಸದ ಅನೇಕ ಕಠಿಣ ಆಸನಗಳು ಶ್ರೀಪಾದರಿಗೆ ಕರತಲಾಮಲಕವಷ್ಟೇ. ಅವರ ದೇಹ ಎಂತಹ ಕಠಿಣಾತಿಕಠಿಣಾಸನಗಳಿಗೂ ತನ್ನ ಬೆಂಬಲ ಕೊಟ್ಟು ಬಿಡುತ್ತದೆ. ಹಾಗೆ ದೇಹವನ್ನು ಹತೋಟಿಯಲ್ಲಿರಿಸಿಕೊಂಡಿದ್ದಾರೆ ಪೂಜ್ಯರು. ಉಸಿರೆಳೆದುಕೊಂಡು ಹೊಟ್ಟೆಯನ್ನೊಳವಾಡಿ ಅದರಲ್ಲೇ ಕಂಬದ ಮಾದರಿಯಲ್ಲಿ ನಿಲ್ಲಿಸುವುದಿದೆಯಲ್ಲ, ಅದು ಯಾರಿಗೂ ಸಾಧ್ಯವಿಲ್ಲ. ಆದರೆ ಕಿರಿಯ ಶ್ರೀಪಾದರು ಸರಳವಾಗಿ ಮಾಡಿ ತೋರಿಸುತ್ತಾರೆ. ಹೀಗೆ ಮಾಡುತ್ತಿದ್ದ ಇನ್ನೊಬ್ಬ ಸಾಧಕರೆಂದರೆ ಅದು ಡಾ. ರಾಜಕುಮಾರ್ ಮಾತ್ರ. ಉಳಿದ ಯೋಗ ತಜ್ಞರೆಲ್ಲಾ ಹೊಟ್ಟೆಯನ್ನೆಳೆದುಕೊಂಡು ಮಿಕ್ಸರಿನಂತೆ ತಿರುಗಾಡಿಸಬಲ್ಲರಷ್ಟೇ ಹೊರತು ಕಂಬದಂತೆ ನಿಲ್ಲಿಸಲಾರರು. ಶ್ರೀ ಪಾದರ ಇನ್ನೊಂದು ವಿಶೇಷ ಗೊತ್ತಾ? ನಾವು ಕಾಲುಗಳಿಂದ ನಡೆಯುತ್ತೇವಲ್ಲಾ ಹಾಗೆಯೇ ಅದಕ್ಕೆ ಕಿಂಚಿತ್ತೂ ವ್ಯತ್ಯಾಸವಿಲ್ಲದೇ ಕಾಲು ಮೇಲೆ ಮಾಡಿ ಕೈಗಳಿಂದಲೇ ಹಲವು ಕಿಲೋಮೀಟರ್ ಕ್ರಮಿಸಬಲ್ಲರು. ಆ ಅವಸ್ಥೆಯಲ್ಲಿಯೇ ಮೆಟ್ಟಿಲುಗಳನ್ನೇರ ಬಲ್ಲರು! ಇನ್ನೂ ಚಕಿತಕಾರಿ ವಿಷಯವೆಂದರೆ ಶ್ರೀಪಾದರು ಮಲ್ಲಗಂಬದ ಕುಸ್ತಿಯ ಪಟ್ಟುಗಳನ್ನು ಬಲ್ಲವರು. ಒಮ್ಮೆ ತೋರಿಸಿದರೆ ಆ ಕೂಡಲೇ ಆ ಪಟ್ಟುಗಳನ್ನು ಮಾಡಿ ತೋರಿಸಿಯೇ ಬಿಡುತ್ತಾರೆ. ಯಾರಿಗೆ ಸಾಧ್ಯ ಇದೆಲ್ಲಾ? ಇದಕ್ಕೆಲ್ಲ ಪ್ರೇರಣೆ ಪೇಜಾವರ ಹಿರಿಯ ಶ್ರೀ ಪಾದರಾದ ಪೂಜ್ಯ ವಿಶ್ವೇಶ ತೀರ್ಥರು. ಹೌದು, ಹಿರಿಯ ಶ್ರೀಪಾದರೂ ಅಷ್ಟೇ. ಎಂದಿಗೂ ಯೋಗವನ್ನು ಬಿಟ್ಟವರಲ್ಲ. ಅವರ ಪ್ರೇರಣೆಯನ್ನೇ ನಮಗೆ ಕೊಟ್ಟವರು ಕಿರಿಯ ಶ್ರೀಪಾದರು. ಜೂನ್ 21 ರಂದು ವಿಶ್ವಯೋಗ ದಿನ. ಈ ದಿನ ಎಂತಹ ಯೋಗದ ಮಹಾ ಸಾಧಕರಿಗೆ ನಮನ ಸಲ್ಲಿಸಿದರೆ ಬದುಕು ಸಾರ್ಥಕವಾಗುತ್ತದೆ. ನಮಗೂ ಯೋಗ ಸಿದ್ಧಿಸುತ್ತದೆ. ಇನ್ನೊಬ್ಬರಿಗೆ ಪ್ರೇರಣೆಯಾಗುತ್ತದೆ. ಅದಕ್ಕಾಗಿ ಈ ಪುಟ್ಟ ನುಡಿ ನಮನ!

ಕೃಪೆ : ವಾಟ್ಸಾಪ್

## ಪರ್ಯಾಯ ಪಲಿಮಾರು ಶ್ರೀಗಳಿಂದ ಶಿಷ್ಯ ಸ್ವೀಕಾರ



ಪರ್ಯಾಯ ಪಲಿಮಾರು ಮಠದ ಪೂಜ್ಯ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಪಲಿಮಾರು ಮೂಲ ಮಠದಲ್ಲಿರುವ ಯೋಗ ದೀಪಿಕಾ ಗುರುಕುಲದ ವಿದ್ಯಾರ್ಥಿ ಶ್ರೀ ಕಂಬ್ಲಕಟ್ಟ ಶೈಲೇಶ್ ಉಪಾಧ್ಯಾಯ ರವರನ್ನು ಮಠದ ಉತ್ತರಾಧಿಕಾರಿ ಯನ್ನಾಗಿ ನೇಮಿಸಿರುತ್ತಾರೆ. ಮೇ ತಿಂಗಳ 9 ರಿಂದ 12ರವರೆಗೆ ಉಡುಪಿ ಶ್ರೀಕೃಷ್ಣ ಮಠದಲ್ಲಿ ಸನ್ಯಾಸ ಸ್ವೀಕಾರದ ವಿಧಿ–ವಿಧಾನಗಳು ಸಾಂಗವಾಗಿ ನಡೆದಿದ್ದು, ನೂತನ ಯತಿ ಶ್ರೀ ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದರ ಪಟ್ಟಾಭಿಷೇಕ ದಿನಾಂಕ 12.5.2019 ರಂದು ಶಾಸ್ತ್ರೋಕ್ತವಾಗಿ ನೆರವೇರಿದೆ.

# ಪರ ನಿಂದೆಗಾಗಿ ಪಾಂಡಿತ್ಯ ಬಳಸುವುದು ಸಲ್ಲ

ಪಂಡಿತನೆನಿಸಿಕೊಂಡ ವ್ಯಕ್ತಿಯೋರ್ವ ತನ್ನ ಪಾಂಡಿತ್ಯವನ್ನು ಪರನಿಂದೆಗಾಗಿ ಬಳಸಿದಲ್ಲಿ ಅಧಃಪತನದತ್ತ ಹೆಜ್ಜೆಯಿಟ್ಟಂತೆನ್ನುವುದನ್ನು ಮಾರ್ಮಿಕವಾಗಿ ಶ್ರುತಿ-ಸ್ಮೃತಿ ತಿಳಿಸಿದೆ. ತುಂಬಿದ ಕೊಡವಾದ ವಿದ್ವಾಂಸ ಎಂದೂ ಬೇರೆಯವರನ್ನು ಅರ್ಥಾತ್ ಬೇರೆ ಪಂಡಿತರನ್ನು ದೂಷಿಸಲಾರ. ಕಾರಣ ತನ್ನ ಗುರುಮುಖೇನ ವಿದ್ಯೆ ಪಡೆಯುವಾಗ ಉತ್ತಮ ಮಟ್ಟದ ಸನ್ನಡತೆಯನ್ನು ಕಲಿಸಿರುತ್ತಾನೆ.

ವಿದ್ಯುನ್ಮಣಿಗಳಿಗಾಗಿ ಶ್ರುತಿ-ಸ್ಮೃತಿ ಮತ್ತೊಂದು ನಿರ್ದೇಶನ ನೀಡಿದೆ. ಪಂಡಿತನೆನಿಸಿಕೊಂಡವನು ಸ್ವಕಾರ್ಯದಲ್ಲಿ ಪರಿಶ್ರಮ ಪಡೆಯದಿರುವುದು ಅರ್ಥಾತ್ ಅನಾಸಕ್ತಿ ಹೊಂದಿರುವುದು - ಅದೆಂದರೆ ತಾನು ದೊಡ್ಡ ಪಂಡಿತನಾಗಿ ಅಲ್ಪ ಕೆಲಸವನ್ನು ಮಾಡಬಾರದೆನ್ನುವ ಗರ್ವವನ್ನು ಹೊಂದಿರುತ್ತಾನೆ. ಅದು ಕೂಡದು ಎನ್ನುತ್ತದೆ ಶ್ರುತಿ-ಸ್ಮೃತಿ.

ಮೂರನೆಯ ನಿರ್ದೇಶನದಂತೆ - ಗುಣಕ್ಕೆ ಮತ್ಸರವಿರಬಾರದು - ಬೇರೊಬ್ಬ ವಿದ್ವಾಂಸ ಗುಣವಂತನಾಗಿದ್ದು ಹೆಚ್ಚಿನ ತಿಳಿವಳಿಕೆ ಹೊಂದಿದವ ನೆಂದು ದ್ವೇಷಿಸಬಾರದು.

ಸ್ವಕಾರ್ಯದಲ್ಲಿ ಶ್ರದ್ಧೆ-ನಿಷ್ಠೆ ಹೊಂದಿದ ಭಾವನೆ ಹೊಂದಿ ಕಾರ್ಯ ನಿರ್ವಹಿಸುವುದು, ಇತರ ಗುಣವಂತ ಪರರನ್ನು ನಿಂದೆ ಮಾಡದಿರುವುದು ಹಾಗೂ ತನ್ನ ಪಾಂಡಿತ್ಯವನ್ನು ಪರನಿಂದೆಗಾಗಿ ಬಳಸುವುದನ್ನು ಶ್ರುತಿ-ಸ್ಮೃತಿ ನಿಷೇಧಿಸಿದೆ.

ವ್ಯಾಖ್ಯಾನ - ಕೋಟೇಶ್ವರ ಸೂರ್ಯನಾರಾಯಣ ರಾವ್

# ದೀರ್ಘಾಯಸ್ಸಿಗಾಗಿ ಮಿತಾಹಾರ ಸೇವನೆ

ಇದೆಯೊಂದು ಹೊಟ್ಟೆ ಬಿರಿಯುವಂತೆ ತಿನ್ನುವುದು, ಅವಶ್ಯಕತೆಯಿಲ್ಲವೆಂದು ವ್ಯಾಯಾಮವಿಲ್ಲದ ಶರೀರವನ್ನು ಬೆಳೆಸುವುದು. ಹಿರಿಯರು ಮಾಡಿಟ್ಟ ಆಸ್ತಿ ಹೇರಳವಾಗಿದೆ ಯೆಂದು ಕೇವಲ ತಿಂದುಣ್ಣುತ್ತಾ ದೇಹವನ್ನು ಗುಡಾಣವನ್ನಾಗಿಸಿಕೊಂಡರೆ ಇತರರು ನಿನ್ನನ್ನು ನೋಡಿ ನಗದೆ ಇರಲು ಸಾಧ್ಯವೇ ಇಲ್ಲ. ಅವರು ಮನಸ್ಸಿನಲ್ಲಾದರೂ ನಿನ್ನನ್ನು ಬಕಾಸುರನ ವಂಶಜನೆಂದು ಭಾವಿಸುವುದು ಖಂಡಿತ.

ನಾಲಿಗೆ ಚಪಲದ ಮೇಲೆ ಹಿಡಿತವಿರಲಿ ಎನ್ನುತ್ತದೆ ಶ್ರುತಿ-ಸ್ಮೃತಿ. ಹಸಿವಿರಲಿ - ಇಲ್ಲದಿರಲಿ ಮಿತಿ ಮೀರಿ ತಿಂದು ತೇಗುವ ವ್ಯಕ್ತಿ ದೇಶಕ್ಕೂ - ಕುಟುಂಬಕ್ಕೂ, ಸಮಾಜಕ್ಕೂ ದೊಡ್ಡ ಹೊರೆಯಾಗುತ್ತಾನೆ. ಕುಟುಂಬದ ಇತರರಿಂದಲೂ ನಿಕೃಷ್ಟ-ವ್ಯಕ್ತಿತ್ವಕ್ಕೆ ಗುರಿಯಾಗುವ ಅಪಾಯವಿದೆ. ಇಂತಹ ವ್ಯಕ್ತಿ ಒಂದು ತುತ್ತು ಅನ್ನಕ್ಕೂ ಗತಿಯಿಲ್ಲದ ದೇಶದ ದಟ್ಟ ದರಿದ್ರರ ಹಸಿವನ್ನು ಅರ್ಥಮಾಡಿಕೊಳ್ಳದೆ ರೋಗರುಜಿನಗಳ ದಾಸನಾಗಿ ಕುಟುಂಬಕ್ಕೆ ಅಸಹನೀಯ ಪೀಡೆಯನ್ನು ನೀಡಿ ಇಹಲೋಕ ವ್ಯಾಪಾರವನ್ನು ಮುಗಿಸುತ್ತಾನೆ. ಆದ ಕಾರಣ ಬದುಕುವುದಕ್ಕಾಗಿ ತಿನ್ನುವುದು ಹೊರತು. ತಿನ್ನುವುದ ಕ್ಕಾಗಿಯೇ ಬದುಕುವುದು ಕೂಡದು. ಹಿತ ಭುಕ್, ಮಿತಭುಕ್ - ಕಾಲಭುಕ್ ಎಂಬ ಸಂಸ್ಕೃತ ಸೂತ್ರ ನಮ್ಮದಾಗಬೇಕು. ಅದರಲ್ಲಿ ರಾಷ್ಟ್ರಹಿತ - ರಾಷ್ಟ್ರಭಕ್ತಿಯೂ ಅಡಗಿರುತ್ತದೆ.

ವ್ಯಾಖ್ಯಾನ - ಕೋಟೇಶ್ವರ ಸೂರ್ಯನಾರಾಯಣ ರಾವ್

# ಮಲೆನಾಡ ಮೈಸಿರಿ

ಪುಣ್ಯಭೂಮಿಯ ತಾಣ / ಮಲೆನಾಡ ಮೈಸಿರಿಯ
ಆರಾಧಿಸುವೆವು ನಾವು / ಹಸಿರು ಪ್ರಕೃತಿಯ ಸಿರಿಯ

ನಿತ್ಯ ಹರಿದ್ವರ್ಣದಲಿ / ಕಂಗೊಳಿಪ ಸಹ್ಯಾದ್ರಿ
ಪಡುವಣದ ಮೈಸಿರಿಯ / ಹೊನ್ನತೆರೆಯಲಿ ನಾವು

ಉಬ್ಬಿದುಬ್ಬರ ತೆರೆಯ / ಉಪ್ಪುನೀರಿನ ತಾವು
ಎಲ್ಲೆಲ್ಲೂ ಜೀವನದಿ / ಹರಿಯುತಿದೆ ಬದಕಿನಲಿ

ಕನ್ನಡದ ನಾಡಿನಲಿ / ಹಚ್ಚ ಹಸುರಿನ ಚೆಲುವು
ಉಕ್ಕಿ ಹರಿಯುತ್ತಿರುವ / ಮಾತೆ ನೇತ್ರಾವತಿ

ಕಾವೇರಿ ಚಿಮ್ಮಿಹಳು / ಕೊಡಗಿನಲಿ ತಾನಾಗಿ
ಪಂಚಗಂಗಾವಳಿಯ / ಚೆಲುವಿಲ್ಲಿ ಅನೂಹ್ಯ

ಕೊಡಚಾದ್ರಿಯಲಿ ನಿಂದು / ನೋಡಿದೆನು ಪೂರ್ವಕ್ಕೆ
ರವಿಯುದಿಸಿದನಾಗ / ಅರುಣ ಕಿರಣದ ಕಾಂತಿ

ಬಾನಿನಲಿ ಮೇಲೆದ್ದ / ರವಿಕಿರಣ ಬಿಸಿಲಾಗೆ
ಭುವಿಯ ಜಲ ನಭಕೇರಿ / ಹನಿಯಾಗಿ ಮಳೆಯಾಯ್ತು

ನೋಡಿಲ್ಲಿ ಮಳೆಬಂದು / ಮಿನುಗುತಿದೆ ಮುತ್ತಾಗಿ
ಹಸಿರು ಹೊದಿಕೆಯಿಂದ / ಪಸರಿಸಿದೆ ಮೈಸಿರಿಯಾ

- ಕೋಟೇಶ್ವರ ಸೂರ್ಯನಾರಾಯಣ ರಾವ್

## ಬೆಂಗಳೂರಿನಲ್ಲಿ ಪುತ್ತಿಗೆ ಶ್ರೀಗಳ ಚಾತುರ್ಮಾಸ್ಯ



ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಶ್ರೀ ಪುತ್ತಿಗೆ ಮಠದ ಪೀಠಾಧಿಪತಿಯವರಾದ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀ ಪಾದಂಗಳರವರು ತಮ್ಮ 46ನೇ ಚಾತುರ್ಮಾಸ್ಯ ವ್ರತವನ್ನು ಬೆಂಗಳೂರು ನಗರ ಬಸವನಗುಡಿಯಲ್ಲಿರುವ ಶ್ರೀ ಗೋವರ್ಧನ ಕ್ಷೇತ್ರದಲ್ಲಿ ಆಚರಿಸಲು ಸಂಕಲ್ಪಿಸಿರುತ್ತಾರೆ. ತನ್ನ 12ನೇ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆಯನ್ನು ಸ್ವೀಕರಿಸಿರುವ ಪೂಜ್ಯ ಸ್ವಾಮೀಜಿಯವರು ಮೂರು ಬಾರಿ ಶ್ರೀ ಕೃಷ್ಣನ ಪರ್ಯಾಯವನ್ನು ಪೂರೈಸಿದ್ದು, ಈ ವರ್ಷದ ಚಾತುರ್ಮಾಸ್ಯವನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿರುವುದು ನಗರದ ಆಸ್ತಿಕ ಬಂಧುಗಳಿಗೆ ಸಂತಸದ ವಿಚಾರವಾಗಿದೆ.

ದಿನಾಂಕ 31.7.2019 ರಿಂದ ದಿನಾಂಕ 14.9.2019ರ ವರೆಗೆ ನಡೆಯಲಿರುವ ಚಾತುರ್ಮಾಸ್ಯ ವ್ರತದ ಸಂದರ್ಭದಲ್ಲಿ ಸಂಸ್ಥಾನ ಪೂಜೆ, ಗುರುಪಾದ ಪೂಜೆ, ಭಿಕ್ಷಾವಂದನೆ, ಪಾಠ ಪ್ರವಚನ ಮತ್ತಿತರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳು ನಿರಂತರವಾಗಿ ಜರುಗಲಿದ್ದು, ಬೆಂಗಳೂರಿನ ಧಾರ್ಮಿಕ ಸಜ್ಜನರು ಹಾಗೂ ಮಠದ ಅಭಿಮಾನಿಗಳು ಈ ಅವಕಾಶದ ಸದುಪಯೋಗವನ್ನು ಪಡೆದುಕೊಂಡು ಶ್ರೀ ಕೃಷ್ಣನ ಅನುಗ್ರಹಕ್ಕೆ ಮತ್ತು ಪೂಜ್ಯ ಶ್ರೀಪಾದರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಚಾತುರ್ಮಾಸ್ಯ ಸೇವಾ ಸಮಿತಿಯು ವಿನಂತಿಸಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

| | | |
|---|---|---|
| **ಶ್ರೀ ವೆಂಕಟೇಶ್** | **ಶ್ರೀ ದಾಸಪ್ರಕಾಶ್** | **ಶ್ರೀ ಎ.ಬಿ. ಕುಂಜಾರ್** |
| 8861698520 | 8105909025 | 9611039332 |

## ಶ್ರೀ ಪುತ್ತಿಗೆ ಮಠಕ್ಕೆ ಉತ್ತರಾಧಿಕಾರಿ ನೇಮಕ

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶ್ರೀ ಪುತ್ತಿಗೆ ಮಠದ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಮಠದ 31ನೇ ಉತ್ತರಾಧಿಕಾರಿಯನ್ನಾಗಿ ಕುಂಜಿ ಬೆಟ್ಟಿನ ಶ್ರೀ ಪ್ರಶಾಂತ ಆಚಾರ್ಯರವರನ್ನು ಆಯ್ಕೆ ಮಾಡಿದ್ದು, ಇವರು ದಿನಾಂಕ 22.4.2019 ರಂದು ಸನ್ಯಾಸ ದೀಕ್ಷೆಯನ್ನು ಪೂಜ್ಯ ಸುಗುಣೇಂದ್ರ ತೀರ್ಥ ಶ್ರೀಗಳಿಂದ ಸ್ವೀಕರಿಸಿರುತ್ತಾರೆ. ಶ್ರೀ ಪ್ರಶಾಂತ ಆಚಾರ್ಯ ಬೆಂಗಳೂರಿನ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಮೂರು ವರ್ಷಗಳಿಂದ ದುಡಿಯುತ್ತಿದ್ದರು.



ಉಡುಪಿ ಸಮೀಪದ ಹಿರಿಯಡ್ಕದ ಮೂಲ ಪುತ್ತಿಗೆ ಮಠದಲ್ಲಿ ಪೂರ್ವಾಭಾವಿಯಾಗಿ ಅನೇಕ ಧಾರ್ಮಿಕ ಪ್ರಕ್ರಿಯೆಗಳು ನಡೆದು, ದಿನಾಂಕ 22.4.2019 ರಂದು ಸನ್ಯಾಸ ದೀಕ್ಷೆ ಮತ್ತು ನೂತನಯತಿ ಶ್ರೀ ಶ್ರೀ ಸುಶ್ರೀಂದ್ರ ತೀರ್ಥ ಸ್ವಾಮೀಜಿಯವರ ಪಟ್ಟಾಭಿಷೇಕ ಕಾರ್ಯಕ್ರಮ ವಿದ್ಯುಕ್ತವಾಗಿ ನೆರವೇರಿದೆ.

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

ಎ. ಪ್ರಭಾಕರ ರಾವ್ ಮ್ಯಾನೇಜಿಂಗ್ ಪಾರ್ಟ್‌ನರ್

ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

# ಉಪಾಧ್ಯ ಮತ್ತು ಕಂಪನಿ



(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ದ. ಕ. ಸಂಘದಿಂದ ಯುಗಾದಿ ಸಂಭ್ರಮ ಮತ್ತು ಸನ್ಮಾನ

ದಕ್ಷಿಣ ಕನ್ನಡಿಗರ ಸಂಘದ ವತಿಯಿಂದ ದಿನಾಂಕ 21-04-2019 ರಂದು ಎಫ್.ಕೆ.ಸಿ.ಸಿ.ಐ. ಸಭಾಂಗಣದಲ್ಲಿ ಯುಗಾದಿ ಸಂಭ್ರಮ ಹಾಗೂ ವಜ್ರ ಮಹೋತ್ಸವ ವರ್ಷದ ಉದ್ಘಾಟನಾ ಸಮಾರಂಭ ಅದ್ದೂರಿಯಿಂದ ನಡೆದಿರುತ್ತದೆ. ಸಮಾರಂಭದ ಉದ್ಘಾಟನೆಯನ್ನು ಎಫ್.ಕೆ.ಸಿ.ಸಿ.ಐ.ನ ಅಧ್ಯಕ್ಷರಾದ ಶ್ರೀ ಸುಧಾಕರ ಎಸ್. ಶೆಟ್ಟಿಯವರು ಜ್ಯೋತಿ ಬೆಳಗುವುದರ ಮೂಲಕ ಮಾಡಿದರು. ಯುಗಾದಿ ಪೂಜೆಯ ನಿರ್ವಹಣೆಯನ್ನು ಶ್ರೀ ಟಿ.ಎಸ್. ನಾಗರಾಜ ಉಪಾಧ್ಯಾಯರು ಮಾಡಿದರೆ, ಡಾ. ಶ್ಯಾಮಸುಂದರ ಉಪಾಧ್ಯರವರು ವಿಕಾರಿ ಸಂವತ್ಸರದ ಪಂಚಾಂಗ ಶ್ರವಣ ಮಾಡಿದರು. ಯುಗಾದಿಯ ಮಹತ್ವವನ್ನು ಪ್ರೊ॥ ಕೆ.ಪಿ. ಪುತ್ತೂರಾಯರು ಸೊಗಸಾಗಿ ವಿವರಿಸಿದರು. ದ.ಕ. ಸಂಘವು ಮಡಿಕೇರಿಯ ನೆರೆ ಸಂತ್ರಸ್ತರಿಗೆ ನೀಡಿರುವ ನೆರವಿನ ಬಗ್ಗೆ ಶ್ರೀ ಕೆ.ಎನ್. ಅಡಿಗ ವಿವರಿಸಿದರು.



ಈ ಸಂದರ್ಭದಲ್ಲಿ ಜನಪ್ರಿಯ ಹೋಟೆಲ್ ಉದ್ಯಮಿ ಹಾಗೂ ಕೆ.ಪಿ.ಹೆಚ್.ಆರ್.ಎ. ಮತ್ತು ತುಳುವೆರೆಂಕ್ಲು ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಎಲ್. ರಾಮನಾಥ ಭಟ್ ಮತ್ತು ಖ್ಯಾತ ಯಕ್ಷಗಾನ ನಿರ್ದೇಶಕರು ಹಾಗೂ ಕಲಾವಿದರಾದ ಶ್ರೀ ಶ್ರೀನಿವಾಸ ಸಾಸ್ತಾನರವರನ್ನು ಸನ್ಮಾನಿಸಲಾಯಿತು. ಶ್ರೀ ರಾಮನಾಥ ಭಟ್‌ರವರ ಪರಿಚಯವನ್ನು ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾವ್ ಮಾಡಿದರೆ, ಶ್ರೀ ಶ್ರೀನಿವಾಸ ಸಾಸ್ತಾನರವರನ್ನು ದ.ಕ. ಸಂಘದ ಜೊತೆ ಕಾರ್ಯದರ್ಶಿ ಶ್ರೀ ಚಂದ್ರಹಾಸ ಎಸ್.ರವರು ಸಭೆಗೆ ಪರಿಚಯಿಸಿದರು. ಸನ್ಮಾನಿತರೀರ್ವರೂ ದ.ಕ. ಸಂಘದ ಜೊತೆಗೆ ತಮ್ಮ ಒಡನಾಟವನ್ನು ನೆನಪಿಸಿಕೊಂಡು, ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸುಧಾಕರ ಶೆಟ್ಟಿಯವರು ಸಂಘದ ಸದಸ್ಯರು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ಉದ್ಯಮದಾರರಾಗಲು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಎಫ್.ಕೆ.ಸಿ.ಸಿ.ಐ. ಎಲ್ಲಾ ರೀತಿಯ ಸಲಹೆ ಸಹಕಾರಗಳನ್ನು ನೀಡುತ್ತಿದೆ ಎಂದು ವಿವರಿಸಿ, ಈ ದಿಸೆಯಲ್ಲಿ ಕಾರ್ಯೋನ್ಮುಖರಾಗಲು ಸದಸ್ಯರನ್ನು ಉತ್ತೇಜಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ದ.ಕ. ಸಂಘವು ಅರವತ್ತನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು ವಜ್ರ ಮಹೋತ್ಸವವನ್ನು ಸಂಘದ ಹಿರಿಮೆ - ಗರಿಮೆಗೆ ಒಪ್ಪುವ ರೀತಿಯಲ್ಲಿ ಆಚರಿಸಲಾಗುವುದು ಎಂದು ಹೇಳಿ ಇದಕ್ಕೆ ಎಲ್ಲಾ ಸದಸ್ಯರ ಸಲಹೆ ಸೂಚನೆ ಹಾಗೂ ಸಂಪೂರ್ಣ ಬೆಂಬಲವನ್ನು ಕೋರಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಯಕ್ಷಕರ್ದಮ ತಂಡದಿಂದ ಶೂರ್ಪನಖಿ ಗರ್ವಭಂಗ ಯಕ್ಷಗಾನ ತಾಳ ಮದ್ದಳೆ ಹಾಗೂ ಇತರ ವಿವಿಧ ಮನೋರಂಜನಾ ಕಾರ್ಯಕ್ರಮಗಳನ್ನು ಸಂಯೋಜಿಸಲಾಗಿತ್ತು. ಸಭೆಯ ಪ್ರಾರಂಭದಲ್ಲಿ ಶ್ರೀ ಹೆಚ್. ರಮೇಶ್ ಭಟ್ ಪ್ರಾರ್ಥನೆ ಮಾಡಿದರೆ, ಉಪಾಧ್ಯಕ್ಷರಾದ ಡಾ. ಕೆ.ಸಿ ಬಲ್ಲಾಳ್‌ರವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಸಂಘದ ಪ್ರಧಾನ ಕಾಯದರ್ಶಿಯವರಾದ ಶ್ರೀ ವೈ. ಜಯಂತ್‌ರಾವ್ ಸಮಾರಂಭಕ್ಕೆ ಭವ್ಯವಾದ ಸಭಾಂಗಣವನ್ನು ಉಚಿತವಾಗಿ ನೀಡಿರುವ ಎಫ್.ಕೆ.ಸಿ.ಸಿ.ಐ. ಮತ್ತು ಅದರ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿಯವರಿಗೆ ಹಾಗೂ ಇತರರಿಗೆ ಧನ್ಯವಾದ ಅರ್ಪಿಸಿದರು. ಸಮಾರಂಭದ ನಿರೂಪಣೆಯನ್ನು ಶ್ರೀ ಎಂ.ಕೆ. ಗುರುಮೂರ್ತಿ ಮತ್ತು ಶ್ರೀ ಎಂ. ಎಸ್. ಭಟ್ ಮಾಡಿರುತ್ತಾರೆ.

***With Best Compliments From :***

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

# ಬಿ. ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

## ಕೋಟೇಶ್ವರ ಸೂರ್ಯನಾರಾಯಣ ರಾವ್

ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.
ಅಧ್ಯಕ್ಷರು

---

ಉದ್ಯಮ :

## ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್

21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು - 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಆನಂದ ಬಳಗ (ರಿ)

ಹೋಟೆಲ್ ಅಜಂತಾ ಆವರಣ, 22 'ಎ', ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001

## ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ಆನಂದ ಬಳಗ (ರಿ) ಬೆಂಗಳೂರು ಇದರ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 15–09–2019ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಬೆಂಗಳೂರಿನ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಅಜಂತಾ ಹೋಟೆಲಿನ ಸಭಾಂಗಣದಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

1. ಪ್ರಾರ್ಥನೆ
2. ಸಭೆಯ ಅಧಿಕೃತ ಚಾಲನೆ – ಅಧ್ಯಕ್ಷರಿಂದ
3. ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು.
4. ಸ್ವಾಗತ ಭಾಷಣ
5. 2018–19ನೇ ಸಾಲಿನಲ್ಲಿ ಅಗಲಿದ ಬಳಗದ ಸದಸ್ಯರಿಗೆ ಶ್ರದ್ಧಾಂಜಲಿ.
6. 2017–18ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನಡವಳಿಕೆಯನ್ನು ಓದಿ ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
7. 2018–19ನೇ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಓದಿ, ಪರಿಶೀಲಿಸಿ ದಾಖಲಿಸುವುದು ಮತ್ತು ಅಂಗೀಕರಿಸುವುದು.
8. 31 ಮಾರ್ಚ್ 2019ರಂದು ಮುಗಿದ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳ ಮಂಡನೆ, ಚರ್ಚೆ, ಪರಿಶೀಲನೆ ಮತ್ತು ಅಂಗೀಕಾರ.
9. 2019–20ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ.
10. ಕಾರ್ಯಕಾರೀ ಸಮಿತಿಯಲ್ಲಿ ತೆರವಾಗುವ ಐದು ಸ್ಥಾನಗಳಿಗೆ ಚುನಾವಣೆ
11. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಬಗ್ಗೆ ಪ್ರಸ್ತಾವನೆ ಮತ್ತು ವಿಚಾರ ವಿನಿಮಯ
12. ವಂದನಾರ್ಪಣೆ

ಸದಸ್ಯರು ಅಧಿಕ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಹಾಜರಿರಬೇಕಾಗಿ ಕೋರಿಕೆ.

ಬೆಂಗಳೂರು
ದಿನಾಂಕ 10–07–2019

**ಶಿವಪುರ ಹರಿದಾಸ ಉಪಾಧ್ಯ**
ಕಾರ್ಯದರ್ಶಿ

---

**ವಿಶೇಷ ಸೂಚನೆಗಳು**

1. ಪ್ರಶ್ನೆಗಳನ್ನು ಕೇಳಬಯಸುವ ಸದಸ್ಯರು ಮಹಾಸಭೆಯ ಒಂದು ವಾರದ ಮುಂಚಿತವಾಗಿ ತಮ್ಮ ಪ್ರಶ್ನೆಗಳನ್ನು ಲಿಖಿತ ಮುಖೇನ ಆನಂದಬಳಗದ ಕಛೇರಿಗೆ ಕಳುಹಿಸತಕ್ಕದ್ದು.
2. 2018–19ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳನ್ನು ಈಮೇಲ್ ಲಭ್ಯವಿರುವ ಸದಸ್ಯರುಗಳಿಗೆ ಈಮೇಲ್ ಮೂಲಕ ಕಳುಹಿಸಲಾಗುವುದು.
3. ಚುನಾವಣೆಯಲ್ಲಿ ಭಾಗವಹಿಸಲು ಇಚ್ಛಿಸುವ ಸದಸ್ಯರು ತಮ್ಮ ನಾಮ ನಿರ್ದೇಶನ ಪತ್ರಗಳನ್ನು ಬಳಗದ ಕಛೇರಿಯಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ (ರಜಾ ದಿನಗಳನ್ನುಳಿದು ಇತರ ದಿನಗಳಲ್ಲಿ) ದಿನಾಂಕ 25.7.2019 ರಿಂದ 5.9.2019 ರವರೆಗೆ ಪಡೆಯಬಹುದು.
4. ತಮ್ಮ ನಾಮ ನಿರ್ದೇಶನವನ್ನು ದಿನಾಂಕ 5.9.2019ರ ಸಂಜೆ 5 ಗಂಟೆಯ ಒಳಗೆ ಬಳಗದ ಕಛೇರಿಗೆ ತಲುಪಿಸತಕ್ಕದ್ದು.
5. ನಾಮ ನಿರ್ದೇಶನವನ್ನು ಹಿಂದೆ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ದಿನಾಂಕ 10.9.2019ರ ಸಂಜೆ 5 ಗಂಟೆಯವರೆಗೆ ಹಿಂಪಡೆಯಬಹುದು.
6. ಯಾವುದೇ ವಿವಾದಾತ್ಮಕ ವಿಚಾರಗಳಲ್ಲಿ ಚುನಾವಣಾ ಅಧಿಕಾರಿಗಳ ತೀರ್ಮಾನವೇ ಅಂತಿಮ.

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

HOTEL
**Sheethal**

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



**Sheethal**
**Residency**

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

**ಎ. ಪ್ರಭಾಕರ ರಾವ್** ಮ್ಯಾನೇಜಿಂಗ್ ಪಾರ್ಟ್‌ನರ್

## ಭೃಗುವಾಣಿಯಲ್ಲಿ ಜಾಹೀರಾತಿಗಾಗಿ ಮನವಿ

ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು, ಆನಂದ ಬಳಗದ ಸುಮಾರು 2000 ಸದಸ್ಯರಿಗೆ ತಲುಪುತ್ತಿದೆ. ಹಾಗೂ ಇತರ ಪ್ರಮುಖ ಸಂಘ–ಸಂಸ್ಥೆಗಳಿಗೂ ಕಳುಹಿಸಲಾಗುತ್ತಿದೆ. ಅಂದರೆ ಭೃಗುವಾಣಿಯ ಒಟ್ಟಾರೆ ಸಂಖ್ಯೆ ಸುಮಾರು 10 ಸಾವಿರದಷ್ಟಿದ್ದು, ಈ ಪತ್ರಿಕೆ ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಿಚಯಿಸಲು ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯದ ಮಾಧ್ಯಮ.

| ಜಾಹೀರಾತು ದರಗಳು (ಪ್ರತಿ ಸಂಚಿಕೆಗೆ) | | |
|---|---|---|
| 2, 3 ಮತ್ತು ಹಿಂಬದಿ ಬಹುವರ್ಣ ರಕ್ಷಾಪುಟ | : | ರೂ.3,000/– |
| ಬಹುವರ್ಣ – ಒಳಪುಟ | : | ರೂ.2,000/– |
| ಕಪ್ಪು ಬಿಳುಪು – ಒಳಪುಟ | : | ರೂ.1,500/– |
| ಅರ್ಧಪುಟ | : | ರೂ.750/– |
| ಕಾಲುಪುಟ | : | ರೂ.400/– |

ಜಾಹೀರಾತು ನೀಡಿ ಪ್ರೋತ್ಸಾಹಿಸಲು ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀ ವೈ. ರಾಧಾಕೃಷ್ಣ**
ಕೋಶಾಧಿಕಾರಿ, ಆನಂದ ಬಳಗ
(98440 58851)

**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**
ಜೊತೆ ಕೋಶಾಧಿಕಾರಿ, ಆನಂದ ಬಳಗ
(94481 34268)

# ಒಂದೇ ಕಲ್ಲಿಗೆ ಎರಡು ಹಕ್ಕಿಗಳು ಡೊನಾಲ್ಡ್ ಟ್ರಂಪ್ ಹುನ್ನಾರ

ಸ್ಪಷ್ಟವಾಗಿ ಗೋಚರವಾಗುವಂತೆ ಅಮೆರಿಕದ ಅಧ್ಯಕ್ಷ ಶ್ರೀ ಡೊನಾಲ್ಡ್ ಟ್ರಂಪ್ ತನ್ನ ರಾಷ್ಟ್ರಕ್ಕಾಗಿ - ಬಿಳಿಯರ ರಾಷ್ಟ್ರವನ್ನಾಗಿಸಲು ಯಾವ ವಿಧದ ಹುನ್ನಾರಕ್ಕೆ ಅಣಿಯಾಗುತ್ತಿದ್ದಾರೆಯೆನ್ನುವುದಕ್ಕೆ ಉದಾಹರಣೆ - 'ಬಿಲ್ಡ್ ಅಮೆರಿಕಾ ವೀಸ' ಕಾನೂನನ್ನು ತರಲು ಹವಣಿಸಿರುವುದಾಗಿದೆ. ಅಮೆರಿಕವನ್ನು ಉತ್ತುಂಗ ಕ್ಕೇರಿಸಲು ಪ್ರಪಂಚದಾದ್ಯಂತ ಪ್ರತಿಭೆಗಳನ್ನು ಬಳಸಿಕೊಳ್ಳುವುದು - ತನ್ಮೂಲಕ ಆಡಳಿತದಲ್ಲಿ ಬಿಳಿ ಸೋಮಾರಿಗಳು ಮೆರೆಯುವುದು ಇದು ಅವರ ಹುನ್ನಾರದ ಚಟುವಟಿಕೆ. ಅವರ ಯೋಜನೆಗಳನ್ನು ಗ್ರೀನ್‌ಕಾರ್ಡ್ ಹೋಲ್ಡರ್ ಎನ್ನುವುದನ್ನು - ರದ್ದು ಮಾಡುವುದು ಹಾಗೂ ಬಿಲ್ಡ್ ಅಮೆರಿಕಾ ವೀಸವನ್ನು ಅಳವಡಿಸಿದರೆ ತೀವ್ರ ರೀತಿಯ ಪರೀಕ್ಷೆಯ ಮೂಲಕ ವಿದೇಶಿ ಪ್ರತಿಭೆಗಳಿಗೆ ಮಣೆ ಹಾಕಿ - ಅವರನ್ನು ಅಮೆರಿಕದ ನಾಗರಿಕರನ್ನಾಗಿಸಿದರೆ ಅವರ ಮಕ್ಕಳು-ಮೊಮ್ಮಕ್ಕಳು ಆ ದೇಶದ ನಾಗರಿಕರಾಗಿ ಅಲ್ಲಿಯೆ ಸ್ಥಗಿತಗೊಳಿಸುವಂತಾಗುವ ಯೋಜನೆಯ ಮೂಲಕ ಸದ್ಯದಲ್ಲಿಯೆ ದಾಳ ಉರುಳಿಸಲಿದ್ದಾರೆ. ಈ ವಿಧದಲ್ಲಿ ವಿಶ್ವಪ್ರತಿಭೆಗಳ ಸಂಗಮ ಅಮೆರಿಕದಲ್ಲಾದರೆ - ಕಡಿಮೆ ಬುದ್ಧಿಮತ್ತೆಯ ವಲಸಿಗರನ್ನು ಆಯ್ಕೆಯಾಗಿಲ್ಲದ ನೆಪದಲ್ಲಿ ವಾಪಾಸು ಕಳಿಸುವುದು ಅವರ ಹುನ್ನಾರವಾಗಿದೆ.

ಈ ವೀಸಾ ನೀತಿಯಲ್ಲಿ ಬುದ್ಧಿವಂತರು ಅಮೆರಿಕದಲ್ಲಿ ಸ್ಥಿತರಾಗಿಸಿ ಮುಂದಿನ ತಲೆಮಾರುಗಳನ್ನು ಅಮೆರಿಕದ ಪ್ರಜೆಗಳನ್ನಾಗಿಸಿದರೆ - ಭಾರತದಲ್ಲಿ-ಹಿರಿಯರಾದ ತಂದೆ-ತಾಯಂದಿರು-ಕಷ್ಟಪಟ್ಟು ಮಕ್ಕಳನ್ನು ಓದಿಸಿದುದಕ್ಕೆ ಸಾರ್ಥಕವಾಗುತ್ತದೆ. ತಮ್ಮ ಮಕ್ಕಳು ಅಮೆರಿಕನರಾದ ನಂತರ - ಆಸರೆಯಿಲ್ಲದ ಈ ಹಿರಿಯರು ವೃದ್ಧಾಶ್ರಮದ ದಾರಿ ಹಿಡಿಯುವುದು ಖಚಿತ. ಇನ್ನೊಂದು ನಷ್ಟವೆಂದರೆ ರಾಷ್ಟ್ರವನ್ನು ಬೆಳೆಸಲು ಬೇಕಾದ ತನ್ನ ಪ್ರತಿಭೆಗಳ ಸೇವೆ ಭಾರತಕ್ಕೆ ಸಿಗದಿರುವುದಾಗಿದೆ.

ವಲಸಿಗರು ಪೂರ್ಣ ನಿಷ್ಠೆಯಿಂದ ಅಮೆರಿಕಕ್ಕಾಗಿ ದುಡಿದರೆ-ಬಿಳಿಯ ಸೋಮಾರಿಗಳು ಆಡಳಿತಕ್ಕೆ ಸೀಮಿತಗೊಳ್ಳುವುದು ಖಚಿತ. ಇದು ಟ್ರಂಪ್ ಹುನ್ನಾರ 'ಬಿಲ್ಡ್ ಅಮೆರಿಕಾ ವೀಸಾ' ಕಾನೂನು ಅಳವಡಿಸಿದರೆ ಏನಾದೀತು ಎನ್ನುವ ಸತ್ಯ ಸದ್ಯದಲ್ಲಿಯೇ ಬಯಲಾಗಲಿದೆ.

**- ಕೋಟೇಶ್ವರ ಸೂರ್ಯನಾರಾಯಣರಾವ್**

## ಹೆಣ್ಣು ಅಂದು - ಇಂದು

ಹೋರಾಡುತಿಹಳು ನೋಡಲ್ಲಿ ನಾರಿ
ಅಂದು ಸೃಷ್ಟಿಯ ರೂಪ ಲಾವಣ್ಯಕೆ ಮರುಗಿ
ವಿಧಿಯ ನುಡಿಯ ಹೊಡೆತಕೆ ಬಳಲಿ
ಕಾಮಾಂಧನ ಕಣ್ಣಿಗೆ ಗಡಗಡನೆ ನಡುಗಿ
ಮನೆಯ ಮೂಲೆಯಲಿ ಕಣ್ಣೀರನು ಒರೆಸಿ
ಹೋರಾಡುತಿಹಳು ನೋಡಲ್ಲಿ ನಾರಿ ।

ವಿಧಿವಿಧಾನಗಳ ಅರಿತ ರೂಪವತಿ
ಸೆರಗಲೇ ಮೈಮುಚ್ಚಿ ನಡೆದ ವನಿತೆ
ಪತಿಯಲ್ಲೇ ಶಿವನ ಕಾಣಿದ ಈಕೆ
ಸ್ವತಂತ್ರವೆಂಬ ಪಟ್ಟಕ್ಕಾಗಿ ಹಂಬಲಿಸಿ
ಹೋರಾಡುತಿಹಳು ನೋಡಲ್ಲ ನಾರಿ ।

ಇಂದು ಹೊಸ್ತಿಲ ದಾಟಿ ಹೊರಬಂದು
ಅನ್ಯಾಯದ ಎದುರಿಗೆ ರಣಚಂಡಿಯಾಗಿ
ವಿದ್ಯೆಯ ಆಸ್ತಿಯಲಿ ಮೇಲುಗೈ ಸಾಧಿಸಿ
ನ್ಯಾಯಕ್ಕಾಗಿ ಬೀದಿಬೀದಿಯಲಿ ತಿರುಗಿ
ಹೋರಾಡುತಿಹಳು ನೋಡಲ್ಲ ನಾರಿ ।

ಗೆದ್ದರೂ ಕಾಲದ ಚಕ್ರದಿ ಸಿಲುಕಿಹಳು
ಹೆಣ್ತನವ ಸ್ವಲ್ಪ ಸ್ವಲ್ಪವೇ ಮರೆತಿಹಳು
ಸಂಬಂಧಗಳ ದಾರದಿ ಹೊಲಿದು
ಮನೆತನದ ದೀಪವ ಬೆಳಗಿ
ಜಗವನ್ನು ಗೆದ್ದು ಕಿರುನಗೆಯ ಬೀರಬೇಕಾಗಿದೆ ।

**- ರತ್ನಶ್ರೀ ಕುದ್ರೆತ್ತಾಯ**

## ದ.ಕ. ಸಂಘದ ವಜ್ರಮಹೋತ್ಸವ

ದಕ್ಷಿಣ ಕನ್ನಡಿಗರ ಸಂಘವು ಕರಾವಳಿ ರತ್ನ ಪ್ರಶಸ್ತಿ ಪ್ರದಾನ ಹಾಗೂ 2019ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅಧಿಕ ಅಂಕಗಳನ್ನು ಪಡೆದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭವನ್ನು ದಿ.29.9.2019 ರಂದು ಸಂಯೋಜಿಸಲಿದೆ. ಸಮಾರಂಭದ ಬಗ್ಗೆ ಹೆಚ್ಚಿನ ವಿವರಗಳು ಸಂಘದ "ಕರಾವಳಿ ಜ್ಯೋತಿ" ತ್ರೈಮಾಸಿಕ ಪತ್ರಿಕೆಯ ಮೂಲಕ ಶೀಘ್ರದಲ್ಲಿ ಲಭ್ಯವಾಗಲಿದೆ.

# ವ್ರತಾಚರಣೆ

**ಹಬ್ಬಹರಿದಿನಗಳು ಸಾಲು ಸಾಲಾಗಿ ಬರುತ್ತಿವೆ. ಈ ವಿಶೇಷ ದಿನಗಳ ಮಹತ್ವವನ್ನು ಅರಿತು ಆಚರಿಸುವಂತಾದರೆ ಹಬ್ಬಗಳ ಆಚರಣೆ ಇನ್ನಷ್ಟು ಅರ್ಥಪೂರ್ಣವಾಗುತ್ತದೆ.**

ಯಾವುದೇ ವ್ರತಗಳನ್ನು ಅರಿತು ಆಚರಿಸಿದರೆ ಅದರ ಫಲ ಜಾಸ್ತಿ. ಇಲ್ಲವಾದರೆ ಕೇವಲ ಕಂಬ ಸುತ್ತುವ ಕೆಲಸ ದಂತೆ ಆದೀತು. ಹಬ್ಬವನ್ನು ವ್ರತದಂತೆ ಆಚರಿಸುವುದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಸಂಕಲ್ಪ, ಸಂಪಾದನೆ, ಸಂಯೋಜನೆ, ಸಂಯಮ, ಸರಳತೆ, ಕಲಾನೈಪುಣ್ಯ, ಸೌಂದರ್ಯೋಪಾಸನೆ, ಉಪವಾಸ, ಕೃತಜ್ಞಾಪೂರ್ವಕ ಶರಣಾಗತಿ ಮೊದಲಾದವುಗಳು ವ್ರತಾಚರಣೆಯಲ್ಲಿ ಅಡಕವಾಗಿರುವ ಪ್ರಮುಖ ವಿಚಾರಗಳು.

'ಸಂಕಲ್ಪ' ವ್ರತದ ಅಸ್ತಿವಾರ. ಇಷ್ಟಪ್ರಾಪ್ತಿಗಾಗಿ, ಅನಿಷ್ಟ ನಿವಾರಣೆಯ ನಿಮಿತ್ತವಾಗಿ, ಕಾಲ ದೇಶ ಉದ್ದೇಶಗಳನ್ನು ಸ್ಮರಿಸಿ, ಕಾಮಿತಾರ್ಥ ಸಿದ್ಧಿಗಾಗಿ ಶ್ರದ್ಧಾಭಕ್ತಿಗಳಿಂದ ಪ್ರಾರ್ಥಿಸುವುದೇ ಸಂಕಲ್ಪ. ವಿಶ್ವೋತ್ತಮ ಶಕ್ತಿಯ ಮೊರೆಹೊಕ್ಕು ಅನನ್ಯ ಶರಣಾಗತ ಭಾವದಿಂದ, "ಹರಿಯ ಕರುಣದೊಳಾದ ಭಾಗ್ಯವ ಹರಿಗೆ ಸಮರ್ಪಿಸುವ" ಕೃತಜ್ಞತೆಯೇ ವ್ರತಾಚರಣೆಯ ಮೌಲಿಕ ವಿಚಾರ. ಸಂಕಲ್ಪವನ್ನು ಈಡೇರುವುದಕ್ಕಾಗಿ ಕೈಗೊಳ್ಳಬೇಕಾದ ಪ್ರಕ್ರಿಯೆಯೇ ವ್ರತಾಚರಣೆ. ವ್ರತಕಲ್ಪವೆನ್ನುವ ಗ್ರಂಥವೇ ವ್ರತಾಚರಣೆಯ ವಿಧಿ ವಿಧಾನಗಳನ್ನು ನಿರೂಪಿಸುವ ಆಕರ ಶಾಸ್ತ್ರ.

ಪ್ರತಿಯೊಂದು ವ್ರತಕ್ಕೂ ಅದರದ್ದೇ ಆದ ಕಲ್ಪೋಕ್ತ ವಿಧಿವಿಧಾನಗಳಿವೆ. ಪೂಜಿಸಲ್ಪಡುವ ಪ್ರಧಾನ ದೇವತೆಗಳ ಕುರಿತಾದ ಅಂಗಪೂಜೆ, ಪತ್ರ ಪೂಜೆ, ಪುಷ್ಪಪೂಜೆ, ಸಮರ್ಪಿಸಬೇಕಾದ ನೈವೇದ್ಯ, ಇತ್ಯಾದಿಗಳ ವಿವರಗಳು ಇದರಲ್ಲಿವೆ. ವ್ರತಾಚರಣೆಯ ಫಲಶ್ರುತಿಯನ್ನು ಮಾತ್ರವಲ್ಲದೆ, ಅದರಲ್ಲಡಕವಾದ ತಾತ್ವಿಕ ಮಹತ್ವವನ್ನು ಮನದಟ್ಟು ಮಾಡಿಕೊಡುವುದೇ ವ್ರತ ಕಥಾಶ್ರವಣದ ಉದ್ದೇಶ. ಉದಾಹರಣೆಗೆ, ಸತ್ಯನಾರಾಯಣ ವ್ರತಕಥೆಯಲ್ಲಿ ವಿವರಿಸಿ ದಂತೆ ದೈವಾನುಗ್ರಹಕ್ಕೆ ಬಡ ಬ್ರಾಹ್ಮಣ, ಸೌದೆ ಮಾರುವವನ, ವೈಶ್ಯ, ಮಹಾರಾಜ, ದನಮೇಯಿಸುವ ಮುಗ್ಧ ಬಾಲಕರು ಪಾತ್ರರಾಗುತ್ತಾರೆ. ಇಷ್ಟಾರ್ಥ ಸಿದ್ಧಿಯ ಬಳಿಕ, ದೈವವನ್ನು ಮರೆತ ಧನಿಕ ವೈಶ್ಯ, ಅವನ ಮಗಳು, ಗೋಪಬಾಲಕರು ಮಾಡಿದ ವ್ರತವನ್ನು ಉಪೇಕ್ಷಿಸಿದ ದೊರೆ ಎಲ್ಲರೂ ಶಿಕ್ಷಾರ್ಹರಾಗುತ್ತಾರೆ.

'ಉಪವಾಸ' ತತ್ವವು ವ್ರತದ ಮಹತ್ವ ವಿಚಾರ. ವ್ರತಾ ಚರಣೆಯ ಆದ್ಯಂತವಾಗಿ ತ್ರಿಕರಣಪೂರ್ವಕವಾಗಿ ಪೂಜನೀಯ ಭಗವಂತನ ಜತೆಯಲ್ಲಿಯೇ ಇರುವುದು ಉಪವಾಸ. ನಿರಾಹಾರ, ಜಾಗರಣೆ, ಇಂದ್ರಿಯ ಸಂಯಮ, ನೈರ್ಮಲ್ಯ, ಅನನ್ಯ ಭಕ್ತಿ ಭಾವ, ಕ್ರಿಯಾ ತತ್ಪರತೆ, ತ್ಯಾಗ ಮನೋಭಾವ ಹಾಗೂ ಸದಾಚಾರಗಳು ವ್ರತನಿಷ್ಠನ ಗುಣಲಕ್ಷಣ.

ಪ್ರತಿಯೊಂದು ಕ್ರಿಯೆಯಲ್ಲೂ ಅಹಂಭಾವವನ್ನು ತೊರೆದು ಪರಮಾತ್ಮನ ಪ್ರೇರಣೆಯಿಂದ ಅವರ ಪ್ರೀತ್ಯರ್ಥ ವಾಗಿ, ಕರ್ಮಫಲವೆಲ್ಲವನ್ನೂ ಅವನಿಗೇ ಸಮರ್ಪಿಸುವ ಪ್ರಾಂಜಲ ಮನೋಭಾವವೇ ವ್ರತದ ಜೀವಾಳ. ವ್ರತಾಚರಣೆಗೆ ಅಗತ್ಯವುಳ್ಳ ದ್ರವ್ಯ ಸಂಪಾದನೆ, ಅವುಗಳ ಸಂಯೋಜನೆ, ಒಪ್ಪ ಓರಣಗಳಿಂದ ಕೂಡಿದ ಕಲಾತ್ಮಕ ಮಂಡನೆ, ಕರಗತವಾದ ಪಾಕನೈಪುಣ್ಯದಿಂದ ಕೂಡಿದ ಭಕ್ಷ್ಯ ಭೋಜ್ಯಗಳ ತಯಾರಿ, ಶಾಸ್ತ್ರೋಕ್ತವಾದ ಪೂಜಾ ಮಂಡಲ, ರಂಗೋಲಿ, ಮಂಟಪಾಲಂಕಾರ, ಪೂಜಾಪರಿಕರಗಳ ಸಂಗ್ರಹ, ಮನೆಮಂದಿಯ ಕೌಶಲ್ಯಗಳ ಸಂಯುಕ್ತ ಹಾಗೂ ಸಂಘಟಿತ ಪ್ರದರ್ಶನವಾಗಿರುತ್ತದೆ.

ಆರಾಧ್ಯ ದೇವರ ಕಲ್ಪೋಕ್ತ ಷೋಡಶೋಪಚಾರ ಪೂಜೆ, ನೈವೇದ್ಯ ಸಮರ್ಪಣೆ, ಮಹಾಮಂಗಳಾರತಿ, ರಾಜೋಪ ಚಾರ ಪೂಜೆಗಳೆಲ್ಲವೂ ಪರಮಾತ್ಮನು ದಯಪಾಲಿಸಿದ ಭೋಗ ಭಾಗ್ಯಗಳಿಗೆ ಸಲ್ಲಿಸುವ ವಂದನಾರ್ಪಣೆ. ಸಂಭವಿಸ ಬಹುದಾದ ನ್ಯೂನಾತಿರೇಕಗಳಿಗೆ ವಿನೀತ ಭಾವದಿಂದ ಕೋರುವ ಕ್ಷಮಾಪಣೆ, ಪ್ರದಕ್ಷಿಣ ನಮಸ್ಕಾರ, ಬ್ರಹ್ಮಾರ್ಪಣ ಕ್ರಿಯೆಗಳು ಕರ್ಮಫಲವೆಲ್ಲವನ್ನೂ ದೇವರಿಗೆ ಸಮರ್ಪಿಸುವ ಉದಾತ್ತ ಭಾವನೆಯ ಪ್ರತೀಕ. ಅಹಂಭಾವವನ್ನು ತೊರೆದ ಪ್ರತೀಕ. ಹಬ್ಬವನ್ನು ವ್ರತಾಚರಣೆಯ ರೂಪದಲ್ಲಿ ಆಚರಿ ಸುವುದರಿಂದ ಮನೆಮಂದಿಯೆಲ್ಲಾ ಹರ್ಷೋಲ್ಲಾಸದಿಂದ ಭಾಗವಹಿಸಿ, ತಮ್ಮಲ್ಲಿರುವ ಪ್ರತಿಭೆ ನೈಪುಣ್ಯಗಳನ್ನು ಮೆರೆದು, ಇಷ್ಟ ದೈವವನ್ನು, ಅತಿಥಿ ಅಭ್ಯಾಗತರನ್ನು ಸಂತಸಪಡಿಸುವ ಅವಕಾಶ ಸೃಷ್ಟಿಯಾಗುತ್ತದೆ. ಆಧ್ಯಾತ್ಮಿಕತೆಯ ಆಯಾಮ ಸೇರಿಕೊಳ್ಳುತ್ತದೆ. ಸಾಂಸಾರಿಕ ಹಾಗೂ ಸಾಮಾಜಿಕ ಬಾಂಧವ್ಯ ಬಲಗೊಳ್ಳುತ್ತದೆ.

ಕಿರಿಯ ಪೀಳಿಗೆಯವರಿಗೆ ನಮ್ಮ ಅರ್ಥಪೂರ್ಣ ಸಂಪ್ರ ದಾಯ, ಭವ್ಯ ಪರಂಪರೆ, ಸನಾತನ ಸಂಸ್ಕೃತಿ ಮೊದಲಾದ ಸದ್ವಿಚಾರಗಳ ಮತ್ತು ಧಾರ್ಮಿಕ ವಿಧಿವಿಧಾನಗಳ ಮಹತ್ವ ಮನದಟ್ಟಾಗುತ್ತದೆ. ಒಟ್ಟಿನಲ್ಲಿ, ವ್ರತಾಚರಣೆ ನಮ್ಮ ಇಚ್ಛಾಶಕ್ತಿ, ದೈವಭಕ್ತಿ, ಆತ್ಮ ಸಂಯಮ, ಸಮರ್ಪಣಾ ಮನೋಭಾವ, ಕೃತಜ್ಞತಾ ಸ್ಮರಣೆ, ಮೊದಲಾದ ಸದ್ಗುಣಗಳಿಗೆ ಪ್ರೇರಕವಾಗಿ, ವ್ಯಕ್ತಿತ್ವದ ಬೆಳವಣಿಗೆಗೆ, ವೈಯಕ್ತಿಕ ಹಾಗೂ ಸಾಮೂಹಿಕ ಉಜ್ಜೀವನಕ್ಕೆ ಕಾರಣವಾಗುತ್ತದೆ. ಬದುಕಿನ ಮೂಲೋದ್ದೇಶ ಸಾಧನೆಗೆ ಸುಗಮ ಸೋಪಾನವಾಗಿ ಸಮಸ್ತ ಮಾನವ ಸಮುದಾಯದ ಅಭ್ಯುದಯಕ್ಕೆ ಸಾಧಕವಾಗುತ್ತದೆ.

**– ಕೃತ ಕೃತ್ಯ**

# ಸುದ್ದಿ ಸಂಗ್ರಹ

## ❑ ಡಾ. ಪುತ್ತೂರಾಯರ 'ಬಾಗಿನ' ಕೃತಿ ಬಿಡುಗಡೆ



ಆನಂದ ಬಳಗದ ಮಹಾ ಪೋಷಕರು ಹಾಗೂ ಜನಪ್ರಿಯ ವಾಗ್ಮಿ, ಚಿಂತಕರು, ಸಾಹಿತಿ ಹಾಗೂ ಶಿಕ್ಷಣ ತಜ್ಞರಾದ ಡಾ.ಕೆ.ಪಿ. ಪುತ್ತೂರಾಯ ರವರ ಹೊಸ ಕೃತಿ 'ಬಾಗಿನ' ದಿ.9.6.2019 ರಂದು ಕೋಲಾರ್ಪಣೆಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಮಾರಂಭದಲ್ಲಿ ಕ.ಸಾ.ಪ.ನ. ಅಧ್ಯಕ್ಷರಾದ ಡಾ. ಮನು ಬಳಿಗಾರ್ ಕೃತಿಯನ್ನು ಬಿಡುಗಡೆ ಮಾಡಿದರೆ. ಪದ್ಮಶ್ರೀ ಪುರಸ್ಕೃತ ಸಾಹಿತಿ ಡಾ. ದೊಡ್ಡರಂಗೇ ಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಖ್ಯಾತ ಹಾಸ್ಯ ಕವಿ ಶ್ರೀ ಹೆಚ್. ದುಂಡಿರಾಜ್ ರವರು ಪುಸ್ತಕದ ಬಗ್ಗೆ ಸೊಗಸಾಗಿ ವಿವರಿಸಿದರು. ಸುಂದರ, ಸಾರ್ಥಕ ಬದುಕಿಗೆ ನೆರವಾಗುವ 106 ಶುಭ ಚಿಂತನೆಗಳನ್ನೊಳಗೊಂಡ ಕೃತಿಯನ್ನು ಅತಿಥಿಗಳೆಲ್ಲರೂ ಕೊಂಡಾಡಿದರು. ಡಾ. ಪುತ್ತೂರಾಯರು ಇದುವರೆಗೆ 300ಕ್ಕೂ ಮಿಕ್ಕಿ ಲೇಖನಗಳನ್ನು ಬರೆದಿದ್ದು, 'ಬಾಗಿನ' ಶ್ರೀಯುತರ 15ನೇ ಕೃತಿಯಾಗಿರುತ್ತದೆ.

## ❑ ಡಾ. ಪುತ್ತೂರಾಯರಿಗೆ "ಕನ್ನಡ ಸೇವಾರತ್ನ" ಪ್ರಶಸ್ತಿ

ಡಾ.ಕೆ.ಪಿ. ಪುತ್ತೂರಾಯರು ವೈದ್ಯಕೀಯ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಗುರುತಿಸಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನವರು ಇವರಿಗೆ "ಕನ್ನಡ ಸೇವಾರತ್ನ" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. ದಿ. 14.5.2019 ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ನೀಡಲಾಯಿತು. ಡಾ. ಪುತ್ತೂರಾಯರಿಗೆ ಅಭಿನಂದನೆಗಳು

## ಶುಭಾಶಯಗಳು

- ❑ ಬಳಗದ ಸಕ್ರಿಯ ಸದಸ್ಯರಾದ ಶ್ರೀ ಪಿ. ಗೋಪಾಲಕೃಷ್ಣ ಭಟ್ ಮತ್ತು ಶ್ರೀಮತಿ ಕಸ್ತೂರಿ ದಂಪತಿಗಳ ಹಾಗೂ ಶ್ರೀಮತಿ ಸರಸ್ವತಿ ಮತ್ತು ಶ್ರೀ ಕೆ.ಕೆ. ಹರಿದಾಸರಾವ್ ದಂಪತಿಗಳ ಮೊಮ್ಮಗ (ಶ್ರೀಮತಿ ಶರ್ಮಿಳಾ ಮತ್ತು ಶ್ರೀ ಪಿ. ವಿವೇಕ್ ದಂಪತಿಗಳ ಸುಪುತ್ರ) ಚಿರಂಜೀವಿ ಸಿದ್ಧಾಂತ ಪೆರ್ಣಂಕಿಲ್ ಎಂಬ ವಟುವಿನ ಬ್ರಹ್ಮೋಪದೇಶ ಸಮಾರಂಭ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ದಿ.10.4.2019 ರಂದು ಸಂಭ್ರಮದಿಂದ ನೆರವೇರಿದೆ.

- ❑ ಬಳಗದ ಸದಸ್ಯರಾದ ಶ್ರೀ ಗಿರೀಶ್ ಕುಮಾರ್ ಮತ್ತು ಶ್ರೀಮತಿ ನಾಗಶ್ರೀ ದಂಪತಿಗಳ ದ್ವಿತೀಯ ಪುತ್ರ ಚಿ. ಸೃಜನ್‌ಕಾರಂತ ಇವರ ಬ್ರಹ್ಮೋಪದೇಶ ದಿ.29.4.2019 ರಂದು ಚೆನ್ನಮ್ಮನ ಅಚ್ಚುಕಟ್ಟಿನ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಸಾಂಸ್ಕೃತಿಕ ಭವನದಲ್ಲಿ ವಿದ್ಯುಕ್ತವಾಗಿ ನೆರವೇರಿದೆ.

- ❑ ಬಳಗದ ಸದಸ್ಯರಾದ ಶ್ರೀ ಪಿ.ಆರ್. ಪ್ರಭಾಕರ್ ರವರ ಮೊಮ್ಮಗ (ಶ್ರೀ ಪ್ರಸಾದ್ ಪಿ. ಮತ್ತು ಶ್ರೀಮತಿ ಶೃತಿ ದಂಪತಿಗಳ ಪುತ್ರ) ಚಿ. ಮಹಿನ್ ಎಂಬ ವಟುವಿನ ಬ್ರಹ್ಮೋಪದೇಶ ದಿನಾಂಕ 26.4.2019 ರಂದು ವಸಂತಪುರದ ಶ್ರೀ ಗುರು ನರಸಿಂಹ ಧಾರ್ಮಿಕ ಸಭಾಂಗಣದಲ್ಲಿ ವಿದ್ಯುಕ್ತವಾಗಿ ನೆರವೇರಿದೆ.

- ❑ ಬಳಗದ ಸಕ್ರಿಯ ಸದಸ್ಯರಾದ ಶ್ರೀ ಕೇಶವರಾಜ್ ಎರ್ಮಾಳು ಮತ್ತು ಶ್ರೀಮತಿ ಆಶಾರಾಣಿಯವರ ಸುಪುತ್ರ ಚಿ॥ ಅಭಯ್ ಎಂಬ ವಟುವಿನ ಬ್ರಹ್ಮೋಪದೇಶವು ದಿ.12.6.2019 ರಂದು ಶ್ರೀ ಗುರು ನರಸಿಂಹ ಕಲ್ಯಾಣ ಮಂದಿರದಲ್ಲಿ ವಿದ್ಯುಕ್ತವಾಗಿ ನೆರವೇರಿದೆ.

- ❑ ಬಳಗದ ಹಿರಿಯ ಸದಸ್ಯರಾದ ಶ್ರೀ ವಿ. ಪದ್ಮನಾಭ ಕೆದಿಲಾಯ ರವರ ಸಹಸ್ರಚಂದ್ರ ದರ್ಶನ ಶಾಂತಿ ಸಮಾರಂಭವು ದಿನಾಂಕ 19.5.2019 ರಂದು ಬೆಂಗಳೂರಿನಲ್ಲಿರುವ ಅವರ ಸ್ವಗೃಹದಲ್ಲಿ ಅತ್ಯಂತ ಸಂಭ್ರಮದಿಂದ ನೆರವೇರಿದೆ.

- ❑ ಬಳಗಕ್ಕೆ ಚಿರಪರಿಚಿತರಾದ ವಿದ್ವಾನ್ ಅನಂತ ವಿಕ್ರಮ್ ದಂಪತಿಗಳು ಖರೀದಿಸಿದ ನೂತನ ಫ್ಲಾಟ್ ಚಕ್ರೇಶ್ವರಿ ಕೃಪಾದ ಪ್ರವೇಶ ಸಮಾರಂಭ ದಿನಾಂಕ 25.5.2019 ರಂದು ಸಾಂಗವಾಗಿ ನೆರವೇರಿದೆ.

## ❑ ವಿದುಷಿ ಸುಪ್ರಿಯ ಹರಿಪ್ರಸಾದ್ ಅವರಿಗೆ ಎಂ.ಎ. (ನೃತ್ಯ)ದಲ್ಲಿ ಚಿನ್ನದ ಪದಕ



ಬೆಂಗಳೂರು ವಿಶ್ವವಿದ್ಯಾನಿಲಯದ 2016-18 ಸಾಲಿನ ಪ್ರದರ್ಶನ ಕಲಾ ವಿಭಾಗ (ನೃತ್ಯ)ದ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ, ಬಳಗಕ್ಕೆ ಚಿರಪರಿಚಿತರಾದ ನೃತ್ಯ ಕಲಾವಿದೆ ಶ್ರೀಮತಿ ವಿ. ಸುಪ್ರಿಯ ಹರಿಪ್ರಸಾದ್ ಮೊದಲನೇ ರ್‍ಯಾಂಕ್ ಗಳಿಸಿದ್ದು, ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ.

ದಿ.22.4.2019 ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಬೆಂ.ವಿ.ವಿ.ದ ಘಟಿಕೋತ್ಸವದಲ್ಲಿ, ಸನ್ಮಾನ್ಯ ಉಪರಾಷ್ಟ್ರಪತಿ ಶ್ರೀ ವೆಂಕಯ್ಯನಾಯ್ಡು ರವರು ಪದಕ ಪ್ರದಾನ ಮಾಡಿದರು. ಮೂಲತಃ ಕಾಸರಗೋಡಿನರಾದ ಇವರು, ಉಬ್ರಂಗಳ ಜಯಪ್ರಕಾಶ ಕುಣಿಕುಳ್ಳಾಯ ಮತ್ತು ವೈ. ಉಷಾರಾಣಿ ಅವರ ಸುಪುತ್ರಿ. ಬೆಂಗಳೂರಿನಲ್ಲಿ ಸಹೋದರಿ ಡಾ. ಕೀರ್ತನಾ ಅವರೊಂದಿಗೆ ತಮ್ಮದೇ ಆದ ಕಲಾಂಶು ನೃತ್ಯ ಹಾಗೂ ಸಂಗೀತ ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದು, ನೂರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾರೆ. ವಿದುಷಿ ಸುಪ್ರಿಯ ಹರಿಪ್ರಸಾದ್ ರವರಿಗೆ ಅಭಿನಂದನೆಗಳು.

## ಭಾವಪೂರ್ಣ ಶ್ರದ್ಧಾಂಜಲಿ

ಬಳಗದ ಪೋಷಕರಲ್ಲಿ ಒಬ್ಬರಾಗಿದ್ದ ಶ್ರೀ ತಲಕಾವೇರಿ ರಾಮಕೃಷ್ಣ ಆಚಾರ್ಯರವರು ದಿ.8.4.2019 ರಂದು ನಿಧನರಾಗಿರುತ್ತಾರೆ. ಈ ಸಂಬಂಧ ಉತ್ತರ ಕ್ರಿಯಾದಿಗಳು ಶ್ರೀ ಅನಂತ ಕೃಷ್ಣ ಅಡಿಗಳ್‌ರವರ ನಿವಾಸದಲ್ಲಿ ನೆರವೇರಿದ್ದು, ವೈಕುಂಠ ಸಮಾರಾಧನೆ ದ್ವಾರಕಾನಾಥ ಭವನದಲ್ಲಿ ದಿ.20.4.2019 ರಂದು ವಿದ್ಯುಕ್ತವಾಗಿ ಜರಗಿದೆ. ಮೃತರ ಆತ್ಮಕ್ಕೆ ಶ್ರದ್ಧಾಂಜಲಿ.

ಬಳಗದಲ್ಲಿ ತನ್ನ ಬಹುಮುಖ ಪ್ರತಿಭೆಯಿಂದ ಚಿರಪರಿಚಿತರಾಗಿರುವ ಹಾಗೂ ಬಳಗದ ಎಲ್ಲಾ ಚಟುವಟಿಕೆಗಳಲ್ಲಿ ಛಾಯಾಗ್ರಾಹಕರಾಗಿ ಸಹಕರಿಸುತ್ತಿರುವ ಶ್ರೀ ಮಟ್ಟಿ ರಾಮಚಂದ್ರರಾವ್ ರವರ ಪತ್ನಿ ಶ್ರೀಮತಿ ಪ್ರಭಾವತಿ ಕೆ. ಇವರು ದಿ. 7.6.2019 ರಂದು ನಿಧನರಾಗಿದ್ದಾರೆ. ಈ ಸಂಬಂಧ ಉತ್ತರ ಕ್ರಿಯೆಗಳು ಗೋಕರ್ಣದಲ್ಲಿ ಜರಗಿದ್ದು, ಶ್ರವಣಾರಾಧನೆ ದಿ.19.6.2019 ರಂದು ವಿದ್ಯಾಪೀಠದಲ್ಲಿ ವಿದ್ಯುಕ್ತವಾಗಿ ನಡೆದಿದೆ

## ❑ ಶ್ರೀಮತಿ ಪ್ರವೀಣಾ ಗೋಪಾಲಕೃಷ್ಣರವರಿಗೆ ಗೌರವ ಡಾಕ್ಟರೇಟ್



ಬಳಗದ ಸದಸ್ಯರಾದ ಶ್ರೀಮತಿ ಪ್ರವೀಣಾ ಗೋಪಾಲಕೃಷ್ಣ ಕುಂಜತ್ತಾಯರವರಿಗೆ ದಿನಾಂಕ 20.5.2019ರಂದು ಥೈಲ್ಯಾಂಡ್ ದೇಶದ ಪಟ್ಟಾಯದಲ್ಲಿ ಎಸ್.ಜಿ.ಎಸ್. ಇಂಟರ್ ನ್ಯಾಷನಲ್ ಫೌಂಡೇಶನ್ ಕಾಲೇಜು ಮತ್ತು ರೀಸರ್ಚ್ ಸೆಂಟರ್, ಬೆಂಗಳೂರು ಇದರ ಸಹಯೋಗದಲ್ಲಿ ನಡೆದ 7ನೇ ಅಂತರಾಷ್ಟ್ರೀಯ ಯೋಗೋತ್ಸವ, ಚಾಂಪಿಯನ್‌ಶಿಪ್ 2019ರ ಸಂದರ್ಭದಲ್ಲಿ ವೇದಿಕ್ ವೆಲ್‌ನೆಸ್ ಯೂನಿವರ್ಸಿಟಿ ಆಫ್ ಫ್ಲೋರಿಡಾ, ಯು.ಎಸ್.ಎ ರವರು 2018-19 ನೇ ಸಾಲಿನ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದ್ದಾರೆ. ಶ್ರೀಮತಿ ಪ್ರವೀಣಾರವರು ಇಂಟರ್ ನ್ಯಾಷನಲ್ ಜ್ಯೂರಿಯಾಗಿಯೂ ಪಟ್ಟಾಯದಲ್ಲಿ ನಡೆದ ಯೋಗ ಫೆಸ್ಟಿವಲ್‌ನಲ್ಲಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಮತಿ ಪ್ರವೀಣಾ ಗೋಪಾಲಕೃಷ್ಣರವರಿಗೆ ಅಭಿನಂದನೆಗಳು.

## ❑ ಡಾ. ಎಂ.ಹೆಚ್. ಸುಪ್ರಭಾ ಅವರಿಗೆ ಬಂಗಾರದ ಪದಕ

ಬಳಗದ ಸದಸ್ಯ ಸಮುದಾಯದಲ್ಲಿ ಪರಿಚಿತ ರಾಗಿರುವ ಡಾ.ಎಂ.ಹೆಚ್. ಸುಪ್ರಭಾರವರು ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ರೀಸರ್ಚ್ ಸೆಂಟರ್‌ನಲ್ಲಿ ಇ.ಎನ್.ಟಿ. ವಿಭಾಗದಲ್ಲಿ ಎಂ.ಎಸ್. ಸ್ನಾತಕೋತ್ತರ ಪದವಿಯನ್ನು ಈ ಸಂಸ್ಥೆಯಲ್ಲೇ ಅತೀ ಹೆಚ್ಚು ಅಂಕಗಳನ್ನು ಪಡೆಯುವುದರೊಂದಿಗೆ ಗಳಿಸಿರುತ್ತಾರೆ. ಈ ಸಾಧನೆಗಾಗಿ ಬಂಗಾರದ ಪದಕ ಮತ್ತು ಪ್ರಶಸ್ತಿಯನ್ನು ಪಡೆದಿರುವ ಡಾ. ಸುಪ್ರಭಾ ಅವರಿಗೆ ಅಭಿನಂದನೆಗಳು. ಬಳಗದ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀ ಹರಿದಾಸ್ ಮುನ್ನೂರು ಮತ್ತು ಶ್ರೀಮತಿ ಅರುಂಧತಿ ದಂಪತಿಗಳ ಪುತ್ರಿಯಾಗಿರುವ ಡಾ. ಸುಪ್ರಭಾ ಎಂ.ಬಿ.ಬಿ.ಎಸ್.ನ್ನು ಬಿ.ಎಂ.ಸಿ.ಯಲ್ಲೇ ಮಾಡಿದ್ದು, ಕಳೆದ ಕೆಲವು ವರ್ಷಗಳಿಂದ ಇ.ಎಸ್.ಐ. ಸಂಸ್ಥೆಯಲ್ಲಿ ಹಿರಿಯ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



# Start the day feeling .....



## .......Light & comfortable




***For sure relief from CONSTIPATION use...***

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma®**
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (Apr-June 2019) Regd. with RNI under No.KARKAN/2012/45587 No. of Pages : 32 (28+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02